## ಪರಮ ಕಾರುಣಿಕನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಬ್ಯಾರಿ ಸಮುದಾಯದ ಸಮಸ್ಯೆಗಳಿಗೆ ಬ್ಯಾರಿ ಸಾಹಿತ್ಯದಿಂದ ಪರಿಹಾರ ಸಾಧ್ಯವೇ?

● ಕೆ. ಎಂ. ಶರೀಫ್, ಮಿತ್ತಬೈಲು

ಧ್ಯೇಯ ವಾಕ್ಯ : ಎಲ್ಲಾ ಸಮಸ್ಯೆಗಳನ್ನು ಸೃಷ್ಟಿಸುವವನು ಮತ್ತು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡುವವನು ಅಲ್ಲಾಹನು. ನಮಗೆ ಅಲ್ಲಾಹನು ನೀಡಿದ ಸಮಸ್ಯೆಗಳು ಎಷ್ಟು ಅರ್ಥವಾಗಿದೆ ಮತ್ತು ಆ ಸಮಸ್ಯೆಗಳನ್ನು ಪರಿಹರಿಸಲು ಅಲ್ಲಾಹನು ತೋರಿಸಬಹುದಾದ ಮಾರ್ಗೋಪಾಯಗಳು ಯಾವುದಿರಬಹುದು? ಎಂಬ ಕುರಿತ ಚಿಂತನೆಯೇ ಈ ಪ್ರಬಂಧದ ಧ್ಯೇಯ.

ಉದ್ದೇಶ : ಬ್ಯಾರಿ ಸಾಹಿತ್ಯಕ್ಕೆ ಅದರದ್ದೇ ಆದ ಸಮಸ್ಯೆಗಳಿರುವುದರಿಂದ ಆ ಸಮಸ್ಯೆಗಳನ್ನು ಪರಿಹರಿಸದೆ ಬ್ಯಾರಿ ಸಮುದಾಯದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಬ್ಯಾರಿ ಸಾಹಿತ್ಯದಿಂದ ಸಾಧ್ಯವಾಗದು. ಆದರೂ ಒಟ್ಟಾರೆ ಸಾಹಿತ್ಯದಿಂದ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವುದು ಅಸಾಧ್ಯವಲ್ಲ. ಒಂದು ಜನ ಸಮುದಾಯಕ್ಕೆ ಅವತೀರ್ಣಗೊಂಡ ಪವಿತ್ರ ಕುರ್‌ಆನ್ ಈ ಜಗತ್ತಿನಲ್ಲಿ ಉಂಟು ಮಾಡಿದಂತಹ ಬದಲಾವಣೆಗಳು ಜಗತ್ತಿನ ಅತ್ಯುನ್ನತ, ಸಾರ್ವಕಾಲಿಕ ಸಾಹಿತ್ಯದ ಕೊಡುಗೆ ಎಂದರೆ ಅದು ಅತಿಶಯೋಕ್ತಿಯಲ್ಲ. ಈ ನಿಟ್ಟಿನಲ್ಲಿ ಬ್ಯಾರಿ ಸಮುದಾಯದ ಮತ್ತು ಬ್ಯಾರಿ ಸಾಹಿತ್ಯದ ಸಮಸ್ಯೆಗಳನ್ನು ಒಟ್ಟೊಟ್ಟಾಗಿ ಪರಿಹರಿಸುವುದು ಸಾಧ್ಯವೇ ಎಂಬ ಮುಲಭೂತ ಪ್ರಶ್ನೆಯೇ ಈ ಪ್ರಬಂಧದ ಉದ್ದೇಶ.

ಸಮಸ್ಯೆಗಳ ಅವಲೋಕನದ ಜಟಿಲತೆ : ಬ್ಯಾರಿ ಜನಾಂಗವು ನಮ್ಮ ದೇಶದ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರೇ ಆಗಿರುವುದರಿಂದ ದೇಶದಲ್ಲಿ ಮುಸ್ಲಿಮರು ಎದುರಿಸುವ ಸಮಸ್ಯೆಗಳನ್ನೇ ಈ ಬ್ಯಾರಿಗಳು ಎದುರಿಸುತ್ತಿದ್ದಾರೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಮಸ್ಯೆಗಳೆಲ್ಲವೂ ಒಂದೇ. ಆದರೆ ಓಂದಿನ ಮತ್ತು ಇಂದಿನ ಸಮಸ್ಯೆಗಳಿಗಿರುವ ಸಂಬಂಧ, ಸ್ವರೂಪಗಳು ಬೇರೆಯಾಗಿರುವಂತೆಯೇ ಅದರ ಅವಲೋಕನ ಮತ್ತು ವಿಶ್ಲೇಷಣಾ ವಿಧಾನ ಕೂಡ ಬೇರೆಯೇ ರೂಪದಲ್ಲಿರುತ್ತದೆ. ಭಾರತದ ಇತರ ಪ್ರದೇಶಗಳ ಮುಸ್ಲಿಮರನ್ನು ಸಾಂಸ್ಕೃತಿಕವಾಗಿ ಒಂದು ದೃಷ್ಟಿಯಿಂದಲೂ ಕೇರಳ ಮತ್ತು ದಕ್ಷಿಣ ಕನ್ನಡದ ಮುಸ್ಲಿಮರನ್ನು ಸಾಂಸ್ಕೃತಿಕವಾಗಿ ಇನ್ನೊಂದು ದೃಷ್ಟಿಯಿಂದಲೂ ಪರಿಗಣಿಸಬೇಕಾಗುತ್ತದೆ. ಯಾಕೆಂದರೆ ಭಾರತದ ಒಟ್ಟು ಸಂಸ್ಕೃತಿಗಳಲ್ಲಿ ಈ ಕರಾವಳಿ ಪ್ರದೇಶದ ಸಂಸ್ಕೃತಿಗಳು ಅತೀ ಹೆಚ್ಚು ಪಕ್ವಗೊಂಡವುಗಳಾಗಿವೆ. ಯಾಕೆಂದರೆ ಪ್ರವಾದಿ ಮುಹಮ್ಮದ್ ಮುಸ್ತಫಾ (ಸ.ಅ.)ರವರ ಕಾಲದಲ್ಲೇ ಇಸ್ಲಾಮೀ ಸಂಸ್ಕೃತಿ ಈ ಪ್ರದೇಶಗಳಿಗೆ ಆಗಮಿಸಿತು. ಅತ್ಯಂತ ಶೀಘ್ರವಾಗಿ ತಮ್ಮ ಸಂಸ್ಕೃತಿಗಳನ್ನು ಪರಿಷ್ಕರಿಸಿಕೊಂಡವರು ಈ ಬ್ಯಾರಿಗಳು. ಒಟ್ಟಿನಲ್ಲಿ ಬ್ಯಾರಿಗಳಿಗೆ ಸಾಂಸ್ಕೃತಿಕವಾಗಿ ಇತರ ಮುಸ್ಲಿಮರಿಗಿಂತ ಭಿನ್ನತೆ ಇದೆ. ಅದು ಭಾಷೆಯಾಗಿರಬಹುದು, ಆಚಾರಗಳಿರಬಹುದು, ಅಭಿವ್ಯಕ್ತಿಯಲ್ಲಿರಬಹುದು.

ಹೀಗಿದ್ದರೂ ಬ್ಯಾರಿ ಜನಾಂಗ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಂದರೆ ಬ್ಯಾರಿಗಳ ನಿತ್ಯ ಬದುಕಿನ ದೈಹಿಕ ಮತ್ತು ಮಾನಸಿಕ ನೆಲೆಗಳಲ್ಲಿ ಸಂಭವಿಸಬಹುದಾದ ಎಡರು ತೊಡರುಗಳಿಗೆ ಸಾಮಾನ್ಯವಾಗಿ ಬ್ಯಾರಿ ಸಮುದಾಯದ ಸಮಸ್ಯೆಗಳು ಎನ್ನಬಹುದು. ಈ ಸಮಸ್ಯೆಗಳನ್ನು ಎರಡಾಗಿ ವಿಂಗಡಿಸಬಹುದು.

I. ನೈಸರ್ಗಿಕ ಸಮಸ್ಯೆಗಳು

II. ಸ್ವಯಂಕೃತ ಸಮಸ್ಯೆಗಳು

I. ನೈಸರ್ಗಿಕ ಸಮಸ್ಯೆಗಳು : ಮನುಷ್ಯನ ಬದುಕು ಈ ನಿಸರ್ಗದೊಂದಿಗೆ ಬೆರೆತಿರುತ್ತದೆ. ಈ ನಿಸರ್ಗದಲ್ಲೇ ಆತನಿಗೆ ಬೇಕಾದುದೆಲ್ಲವೂ ದೊರಕುತ್ತದೆ. ಆದರೆ ಅದನ್ನು ಪಡೆಯಲು ಆತ ತೋರಿಸುವ ಉತ್ಸುಕತೆಯನ್ನು ಅವಲಂಬಿಸಿ ಅದರ ಲಭ್ಯತೆ ಇರುತ್ತದೆ. ನಿಸರ್ಗವನ್ನು ವ್ಯತಿರಿಕ್ತವಾಗಿ ಉಪಯೋಗಿಸಿದರೆ ಅದರ ವೈಪರೀತ್ಯಗಳಿಗೆ ಬಲಿಯಾಗಬೇಕಾಗುತ್ತದೆ.

ಈ ನೈಸರ್ಗಿಕ ಸಮಸ್ಯೆಗಳನ್ನು ಕೂಡ ವಿಂಗಡಿಸಬಹುದು.

1. ನಿಸರ್ಗದ ವೈಪರೀತ್ಯದಿಂದಾಗಿ ಮನುಷ್ಯನ ಬದುಕು ಏರುಪೇರಾಗುವುದು.
   ಬ್ಯಾರಿ ಸಮುದಾಯ ಹೆಚ್ಚಾಗಿ ವಾಸಿಸುವ ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ನೆರೆಹಾವಳಿ, ಗುಡುಗು,

ಮಿಂಚು ಬಿರುಗಾಳಿ ಇತ್ಯಾದಿ. ಭೂಕಂಪ, ಬರಗಾಲ ಮುಂತಾದವುಗಳು ಇನ್ನಿತರ ವೈಪರೀತ್ಯ. ಪ್ರತೀ ವರ್ಷ ಇಂತಹ ವೈಪರೀತ್ಯಕ್ಕೆ ಒಳಗಾಗುವರಲ್ಲಿ ಬ್ಯಾರಿಗಳಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

2. ಪರಂಪರಾಗತವಾಗಿ ಬರುವ ಖಾಯಿಲೆಗೆ ತುತ್ತಾಗುವುದು ಮತ್ತು ವ್ಯಾಪಕವಾಗಿ ಬರುವ ಖಾಯಿಲೆಗೆ ಬಲಿಯಾಗುವುದು.

3. ಬುದ್ಧಿಶಕ್ತಿಯ ಅಸಮತೋಲನೆ.

ಇವು ನೈಸರ್ಗಿಕ ಸಮಸ್ಯೆಗಳು ಇದಕ್ಕೆ ಪರಿಹಾರ ಬೇಕು ಎಂದು ಬಯಸುವಂತಿಲ್ಲ.

II. ಸ್ವಯಂಕೃತ ಸಮಸ್ಯೆಗಳು : ಜನರ ನಡುವಿನ ಬೌದ್ಧಿಕ ಹೆಚ್ಚು ಕಮ್ಮಿಯಿಂದಾಗಿಯೇ ಈ ಸಮಸ್ಯೆಗಳು ಉದ್ಭವವಾಗುವುದರಿಂದ ಇದನ್ನು ಕೂಡ ನೈಸರ್ಗಿಕ ಸಮಸ್ಯೆ ಎಂದು ಕರೆಯಬಹುದು. ಕಡಿಮೆ ಬುದ್ಧಿ ಇರುವ ವ್ಯಕ್ತಿ ಅಥವಾ ಹೆಚ್ಚು ಬುದ್ಧಿ ಇದ್ದು ಕಡಿಮೆ ವಿವೇಚನೆ ಇರುವ ವ್ಯಕ್ತಿ ನಮ್ಮ ಸಮುದಾಯದಲ್ಲಿ ಒಂದು ಅನಾಹುತವನ್ನು ಸೃಷ್ಟಿಸಿದರೆ ಆ ಸಮುದಾಯದಲ್ಲಿರುವ ಹೆಚ್ಚು ಬುದ್ಧಿ ಇರುವವರೂ ಹೆಚ್ಚು ವಿವೇಚನೆಯಿರುವವರೂ ಕಡಿಮೆ ಬುದ್ಧಿ ಇರುವವರೂ ಕಡಿಮೆ ವಿವೇಚನೆಯಿರುವವರೂ ಒಂದೇ ರೀತಿಯಾಗಿ ಆ ಅನಾಹುತಕ್ಕೆ ಬಲಿಯಾಗುತ್ತಾರೆ. ಆದುದರಿಂದ ಇದು ಸ್ವಯಂಕೃತ ಸಮಸ್ಯೆ.

ಈ ಸ್ವಯಂಕೃತ ಸಮಸ್ಯೆಗಳಿಗೆ ಬ್ಯಾರಿ ಜನಾಂಗ ಬಲಿಯಾದಷ್ಟು ಹೆಚ್ಚು ಇತರ ಜನಾಂಗ ಬಲಿಯಾಗಿಲ್ಲ. ಬ್ಯಾರಿಗಳು ಯಾಕೆ ಮತ್ತು ಹೇಗೆ ಈ ಸಮಸ್ಯೆಗಳನ್ನೆಲ್ಲಾ ಎಳೆದು ತಂದು ಈ ಸಮುದಾಯದ ಪ್ರಗತಿಗೆ ತಡೆಯಾಗಿದ್ದಾರೆ ಎಂದು ವಿವರಿಸಿದಾಗ ಸ್ವಯಂಕೃತ ಸಮಸ್ಯೆಗಳ ಪಟ್ಟಿ ದೊರೆಯುತ್ತದೆ.

1. ಶ್ರೇಣೀಕರಣ : ಬ್ಯಾರಿ ಸಮುದಾಯದ ಸ್ವಯಂಕೃತ ಸಮಸ್ಯೆಗಳಲ್ಲಿ ಮೊತ್ತ ಮೊದಲನೆಯದು ಸಮುದಾಯದ ವರ್ಗೀಕರಣ. ಇದು ಒಂದು ಕಲ್ಪನೆ ಎಂದೇ ಇಟ್ಟುಕೊಳ್ಳೋಣ. ಆದರೆ ಬ್ಯಾರಿಗಳ ಮನಸ್ಸಿನ ಮೂಲೆಯಲ್ಲಿರುವ ಈ ಅಸ್ಪಷ್ಟ ವರ್ಗೀಕರಣವನ್ನು ಹೊರಗೆಳೆಯದಿದ್ದರೆ ಸಮಸ್ಯೆಗಳ ಮೂಲ ಕಂಡು ಹಿಡಿದಂತಾಗುವುದಿಲ್ಲ. ಈ ವರ್ಗೀಕರಣದ ಪ್ರಕಾರ ಬ್ಯಾರಿಗಳು :-

a. ಬಡವರು ಮತ್ತು ಅವಿದ್ಯಾವಂತರು.
b. ಬಡವರು ಮತ್ತು ವಿದ್ಯಾವಂತರು
c. ಶ್ರೀಮಂತರು ಮತ್ತು ಅವಿದ್ಯಾವಂತರು
d. ಶ್ರೀಮಂತರು ಮತ್ತು ವಿದ್ಯಾವಂತರು
e. ಧಾರ್ಮಿಕ ವಿದ್ವಾಂಸರು (ಇವರು ಬಡವರಾಗಿರಲಿ, ಶ್ರೀಮಂತರಾಗಿರಲಿ, ಲೌಕಿಕ ವಿದ್ಯೆ ಇದ್ದವರಾಗಲಿ ಇಲ್ಲದವರಾಗಲಿ ಸಮುದಾಯದ ಶ್ರೇಣೀಕರಣದ ಮೇಲಿನ ಹಂತದಲ್ಲಿರುತ್ತಾರೆ).

ಈ ಶ್ರೇಣೀಕರಣದ ಹಿನ್ನೆಲೆಯಲ್ಲಿ ಬ್ಯಾರಿಗಳನ್ನಿಟ್ಟು ವಿವರಿಸಿದಾಗ ಸಮಸ್ಯೆಗಳ ವಿವಿಧ ಮುಖಗಳು ಗೋಚರಿಸುತ್ತದೆ. ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಯೇ ಮೇಲಿನ ಶ್ರೇಣೀಕರಣದ ಮುಖ್ಯ ಮಾನದಂಡ. ಇಲ್ಲಿ ಒಂದು ವರ್ಗ ಇನ್ನೊಂದು ವರ್ಗದ ಮೇಲೆ ಒಂದೊಂದು ವಿಷಯದಲ್ಲಿ ಹಿಡಿತ ಸಾಧಿಸಲು ಹವಣಿಸುತ್ತಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಬ್ಯಾರಿಗಳಲ್ಲಿ 'ಸಾಮಾನ್ಯ ಮನುಷ್ಯ' ಯಾರು ಎಂದು ಕೇಳಿದರೆ ಎಲ್ಲರೂ ತೋರಿಸುವುದು ಈ ಶ್ರೇಣೀಕರಣದ ಕೆಳಹಂತದಲ್ಲಿರುವ 'ಬಡವರು ಮತ್ತು ಅವಿದ್ಯಾವಂತರನ್ನೇ'. ಎಲ್ಲರ ಬಲಿಪಶು ಕೂಡ ಅವನೇ. ಎಲ್ಲರೂ ಉದ್ಧಾರ ಮಾಡಲು ಹೊರಟಿರುವುದೂ ಅವನನ್ನೇ. ಆರ್ಥಿಕವಾಗಿ ಅಥವಾ ಶೈಕ್ಷಣಿಕವಾಗಿ. ಆದರೆ ಆತನಿಗೂ ಒಂದು ವ್ಯಕ್ತಿತ್ವವಿದೆ. ಒಂದು ದುಡಿಮೆ ಇದೆ, ಒಂದು ಜವಾಬ್ದಾರಿ ಇದೆ ಎಂದು ಒಪ್ಪಿಕೊಂಡರೆ ಈ ಸಮುದಾಯದ ನಿರ್ಮಾಣದಲ್ಲಿ ಆತನ ಪಾಲು ಎದ್ದು ಕಾಣುತ್ತದೆ.

2. ಶೈಕ್ಷಣಿಕ ಸಮಸ್ಯೆ : ಇದೊಂದು ಅತೀ ಗೊಂದಲದ ಸಮಸ್ಯೆ. ಯಾಕೆಂದರೆ :-

a. ಶಿಕ್ಷಣ ಅಂದರೆ ಏನು ಎಂದು ಯಾರೂ ಹೇಳದಿರುವುದು.
b. ಶಿಕ್ಷಣ ಯಾಕೆ? ಹೇಗೆ? ಎಷ್ಟು ಎಂದು ತಿಳಿಯದಿರುವುದು.
c. ತಿಳಿದೋ ತಿಳಿಯದೆಯೋ ಶಿಕ್ಷಣವನ್ನು ಲೌಕಿಕ ಶಿಕ್ಷಣ ಮತ್ತು ಧಾರ್ಮಿಕ ಶಿಕ್ಷಣ ಎಂದು ವಿಂಗಡಿಸಿರುವುದು.
d. ಕಲಿಕೆ ಇರುವುದು ಗಳಿಕೆಗಾಗಿ ಎಂಬ ಸಾರ್ವತ್ರಿಕ ಧೋರಣೆ.

ಶೈಕ್ಷಣಿಕ ಸಮಸ್ಯೆಗಳನ್ನು ಗಮನಿಸಿದಾಗ ಮೇಲಿನ ಅಂಶಗಳಿಗೆ ಒತ್ತುಕೊಟ್ಟು ವಿವರಿಸಬೇಕಾಗುತ್ತದೆ. ಬ್ಯಾರಿ ಸಮುದಾಯಕ್ಕೆ ಮಾಹಿತಿ ಮತ್ತು ಜಾಗೃತಿ ಎರಡೂ ಒಟ್ಟೊಟ್ಟಿಗೆ ನೀಡಬೇಕಾಗುತ್ತದೆ. ಎಲ್ಲರೂ ಜಾಗೃತಿಯನ್ನು ಕೊಡುತ್ತಾರೆ. ಆದರೆ ಮಾಹಿತಿ ಕೊಡುವುದಿಲ್ಲ. ಇದಕ್ಕೆ ಸಮಯದ ಅಭಾವವೂ ಕಾರಣವಿರಬುದು. ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೇಂದ್ರಗಳಿಗೆ ಇಲ್ಲಿ ತುಂಬಾ ಜವಾಬ್ದಾರಿ ಇದೆ.

a. ಶಿಕ್ಷಣ ಅಂದರೇನು? ಶಿಕ್ಷಣ ತಜ್ಞರು ಕೂಡ ಪುಷ್ಟೀಕರಿಸಿ ಕೊಡುವ ಒಂದು ಮುಖ್ಯ ಸಂಗತಿ ಏನೆಂದರೆ ಒಂದು ಮಗುವು ತಾಯಿಯ ಗರ್ಭದಲ್ಲಿರುವಾಗಲೇ ಕಲಿಯಲು ಪ್ರಾರಂಭಿಸುತ್ತದೆ ಎನ್ನುವುದು ಅಂದರೆ ಶಿಕ್ಷಣ ಮಗು ತಾಯಿಯ ಗರ್ಭದಲ್ಲಿರುವಾಗಲೇ ಪ್ರಾರಂಭಗೊಳ್ಳಬೇಕು. ಶಿಕ್ಷಣ ಅಂದರೆ ಒಂದು ಮಗುವಿನಲ್ಲೂ ಮತ್ತು ಮನುಷ್ಯನಲ್ಲೂ ಅತ್ಯುತ್ತಮವಾಗಿರುವ ಎಲ್ಲವನ್ನೂ ಅಂದರೆ ದೇಹ - ಬುದ್ಧಿ - ಚೇತನ - ಸಂಪೂರ್ಣ ವಾಸ್ತವಿಕವಾಗಿ ವಿಕಸಿಸುವಂತೆ ಮಾಡುವುದು. ಪ್ರಾಣಿ ವರ್ಗದಲ್ಲಿ ಮನುಷ್ಯನಿಗೆ ಮೆದುಳಿನ ಪ್ರಮಾಣ ದೊಡ್ಡದು ಮತ್ತು ಶಿಶುತನ ಎಂಬುದು ಅತೀ ದೀರ್ಘ; ಇವೆರಡನ್ನೂ ಪರಿಗಣಿಸಿದಾಗ ಬುದ್ಧಿ, ದೇಹ, ಆತ್ಮ ಇವೆಲ್ಲವನ್ನೂ ವಿಕಸಿಸುವುದೇ ಶಿಕ್ಷಣ. ಈಗ 'ಬ್ಯಾರಿಗಳಿಗೆ ಶಿಕ್ಷಣ' ಅಂದರೇನು? ಎಂಬ ಸಂಶಯವಿರುತ್ತದೆ.

ಸಾಮಾನ್ಯವಾಗಿ ವ್ಯಕ್ತಿಯು ಬಾಳಬೇಕಾಗಿರುವ ಸಾಮುದಾಯಿಕ ಜೀವನದಲ್ಲಿ ಕಂಡುಬರುವ ಸಾರ್ವತ್ರಿಕ ತತ್ವವನ್ನು ಶಿಕ್ಷಣ ಅವಲಂಬಿಸಿರಬೇಕು. ಅಂದರೆ ಆಧ್ಯಾತ್ಮಿಕ ಜೀವನದ ದೃಷ್ಟಿ ಮತ್ತು ಲೌಕಿಕ ಜೀವನದ ವಾಸ್ತವಿಕ ದೃಷ್ಟಿ. ಅಂದರೆ ಬ್ಯಾರಿಗಳ ಆಧ್ಯಾತ್ಮಿಕ ಜೀವನ ಅಂದರೆ ಇಸ್ಲಾಂ. ಬ್ಯಾರಿಗಳ ಲೌಕಿಕ ಜೀವನದ ವಾಸ್ತವಿಕತೆ ಅಂದರೆ ಅದು ಕೂಡ ಇಸ್ಲಾಂ. ಈಗ ಬ್ಯಾರಿಗಳಲ್ಲಿ ಶಿಕ್ಷಣದ ಎರಡು ದೃಷ್ಟಿಗಳೂ ಇಸ್ಲಾಂ ಎಂಬ ಬಿಂದುವಿನಲ್ಲೇ ಸಂಧಿಸುತ್ತದೆ. ಹೀಗಿರುವಾಗ ಸಮಾಜ ಜೀವನಕ್ಕೆ ಪೂರಕವಾಗಿರುವುದೆಲ್ಲವನ್ನೂ ಕಲಿಯಬಹುದು ಮತ್ತು ಅದು ಬ್ಯಾರೀ ಸಂಸ್ಕೃತಿಯ ಪರಿಷ್ಕೃತ ರೂಪವಾದ ಇಸ್ಲಾಮಿಗೆ ವಿರುದ್ಧವಾಗಿರಬಾರದು.

ಈ ಎರಡು ಮೂಲಭೂತ ತತ್ವಗಳಿಂದ ವಿಚಲಿತರಾಗದೆ ಒಂದು ವ್ಯಕ್ತಿತ್ವವು ಮತ್ತೊಂದು ವ್ಯಕ್ತಿತ್ವದ ಮೇಲೆ ಭಾವ ಪ್ರದರ್ಶನ, ನಡವಳಿಕೆಗಳ ವಿನಿಮಯ ವಾಕ್ ವಿನಿಮಯ ಮುಂತಾದವುಗಳ ಪ್ರಭಾವವನ್ನು ಪ್ರಸರಿಸಿ ಆ ವ್ಯಕ್ತಿಯ ಬೆಳವಣಿಗೆಯನ್ನು ರೂಪಿಸುವುದೇ ಶಿಕ್ಷಣ. ಶಾಲೆ, ಮದ್ರಸಗಳು ಇದರ ಒಂದು ವ್ಯವಸ್ಥಿತ ರೂಪ ಅಷ್ಟೇ. ಶಿಕ್ಷಣ ಜೀವನದಲ್ಲಿ ನಿರಂತರವಾಗಿರುತ್ತದೆ.

b. ಶಿಕ್ಷಣ ಯಾಕೆ? ಹೇಗೆ? ಎಷ್ಟು?

ಒಂದು ಕುಟುಂಬವು ಶಿಕ್ಷಣದ ಒಂದು ಸಂಸ್ಥೆ. ಬ್ಯಾರಿಗಳ ವೈಯಕ್ತಿಕ ಜೀವನದಲ್ಲಿ ಕುಟುಂಬ ಜೀವನಕ್ಕೆ ಬಹಳ ಪ್ರಾಮುಖ್ಯತೆ ಇದೆ. ಸಾಮಾಜಿಕ ಸಂಸ್ಥೆಗೆ ಕುಟುಂಬವೇ ಒಂದು ಅಸ್ತಿಭಾರ. ಇತರ ಸಮುದಾಯದಲ್ಲಿರುವುದಕ್ಕಿಂತ ಬ್ಯಾರಿಗಳಲ್ಲಿ ಕುಟುಂಬದ ಪ್ರಾಮುಖ್ಯತೆ ಅಧಿಕವಾಗಿದೆ. ನಮ್ಮ ಸಮುದಾಯವು ಕುಟುಂಬದ ದೃಷ್ಟಿಯನ್ನೇ ಪ್ರಬಲವಾಗಿ ಅನುಸರಿಸುತ್ತದೆ. ಅಂದರೆ ಒಂದು ಕುಟುಂಬದ ಪೋಷಣೆಗೆ ಸಾಧ್ಯವಾಗುವಷ್ಟನ್ನು ಮಾತ್ರ ಕಲಿತರೆ ಸಾಕು ಎಂಬ ಅಭಿಪ್ರಾಯ ನಮ್ಮಲ್ಲಿದೆ.

ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಜ್ಞಾನ ಸ್ಫೋಟನೆ ಆಗುತ್ತಿದೆ. ಪ್ರತಿಕ್ಷಣದಲ್ಲೂ ಈ ಜಗತ್ತು ಬದಲಾಗುತ್ತಿದೆ. ವಿಶ್ವವ್ಯಾಪಿಯಾಗಿರುವ ಜ್ಞಾನವನ್ನು ಒಂದು ಸೀಮಿತ ಶಿಕ್ಷಣ ಪದ್ಧತಿ ಒದಗಿಸಲಾರದು. ಆದುದರಿಂದ ಶಿಕ್ಷಣವನ್ನು ಯಾಕೆ ಪಡೆಯಬೇಕು? ಹೇಗೆ ಪಡೆಯಬೇಕು? ಎಷ್ಟು ಪಡೆಯಬೇಕು ಎಂಬುದರ ಕುರಿತು ಒಂದು ಪರಿಕಲ್ಪನೆ ಪ್ರತಿಯೊಬ್ಬ ಬ್ಯಾರಿಗೆ ಇರಲೇಬೇಕು.

ಈ ನಿಟ್ಟಿನಲ್ಲಿ ಒಂದು ಸಮೀಕ್ಷೆ ನಡೆಸಿದಾಗ ಕೆಲವು ಬ್ಯಾರಿಗಳು ನೀಡಿದ ಉತ್ತರದಲ್ಲಿ ಈ ಕೆಳಗಿನ ವಿವರಗಳನ್ನು ಸಂಗ್ರಹಿಸಬಹುದು.

1. ಸಾಮಾಜಿಕ ಪ್ರತಿಷ್ಠೆ
2. ಬೌದ್ಧಿಕ ಬೆಳವಣಿಗೆ
3. ಸಾಂಸ್ಕೃತಿಕ ಕಾರಣಗಳು
4. ಆರ್ಥಿಕ ಪ್ರಗತಿ
5. ಧಾರ್ಮಿಕ ಮತ್ತು ನೈತಿಕ ಮೌಲ್ಯಗಳು
6. ಶೋಷಣೆಯಿಂದ ಪಾರಾಗುವುದು.

ಅಂದರೆ ಶಿಕ್ಷಣ ಯಾಕೆ ಎಂಬುದಕ್ಕೆ ನಮ್ಮ ಸಮುದಾಯದಲ್ಲಿ ಸ್ಪಷ್ಟ ಉತ್ತರವಿದೆ. ಬ್ಯಾರಿಗಳು ಶಿಕ್ಷಣದ ಮಹತ್ವವನ್ನು

ತಿಳಿಯುತ್ತಾ ಬಂದಿದ್ದಾರೆ. ಆದರೆ ಹೇಗೆ ಮತ್ತು ಎಷ್ಟು ಎಂಬುದರಲ್ಲಿ ಗೊಂದಲವಿದೆ. ಪ್ರತಿಯೊಂದು ಕುಟುಂಬವು ತಮ್ಮ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ಸೂಕ್ತ ಶಿಕ್ಷಣ ನೀಡಲು ಮುಂದಾಗಬೇಕು. ಹೀಗೆ ಮುಂದಾದರೆ ನಮ್ಮ ದೇಶದ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಿಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಮ್ಮ ಸರ್ಕಾರವು ನಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಅಷ್ಟೇ ಜವಾಬ್ದಾರಿಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಜನರೇ ಆಡಳಿತಗಾರರಾಗಿರುವುದರಿಂದ ಅವರ ಶಿಕ್ಷಣದ ಬಗ್ಗೆ ಸರ್ಕಾರವೇ ಕಡ್ಡಾಯವಾಗಿ ಹೆಚ್ಚು ಗಮನ ಕೊಡಬೇಕು.

ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರೂಪದ ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಅಗತ್ಯವೆನಿಸುವಷ್ಟು ವಿಷಯ ಜ್ಞಾನ ಕೌಶಲಗಳನ್ನು ಪ್ರತಿಯೊಬ್ಬ ಬ್ಯಾರಿಯೂ ಗಳಿಸಿಕೊಳ್ಳುವುದು ಅಗತ್ಯವೆನಿಸಿದೆ. ಮಕ್ಕಳ ಬೌದ್ಧಿಕ, ನೈತಿಕ, ಪ್ರಾಮಾಣಿಕ ಕೆಲಸ ಕಾರ್ಯಗಳ ಪ್ರಭಾವಕ್ಕೆ ಸೂಕ್ತವಾಗಿ ಮನಸ್ಸನ್ನು ಎಚ್ಚರಗೊಳಿಸುವುದು ಹಿರಿಯರ ಕೆಲಸ.

ಶಿಕ್ಷಣಕ್ಕೆ ಮಿತಿಯಿಲ್ಲ. ಒಬ್ಬ ತನ್ನ ಜೀವನವಿಡಿ ಕಲಿಯುವಂತಹದ್ದು ಅತ್ಯಲ್ಪ. ಆದರೆ ಅದು ಅವನಿಗೆ ಸಾಕಾಗುತ್ತದೆ. ಆ ಸಾಕಾಗುವಷ್ಟನ್ನಾದರೂ ಕಲಿಯದಿದ್ದರೆ, ಯಾವ ಕೌಶಲಗಳೂ, ತಿಳುವಳಿಕೆಯೂ ಇಲ್ಲದಿದ್ದರೆ ಆ ವ್ಯಕ್ತಿ ಸಮುದಾಯದ ಒಂದು ತಲೆನೋವಾಗಿ ಪರಿಣಮಿಸುತಾನೆ.

**C. ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಎಂಬ ವಿಂಗಡನೆ ಎಷ್ಟು ಸರಿ? :-** ಬ್ಯಾರಿಗಳೆಡೆಯಲ್ಲಿ ಪರಂಪರಾಗತವಾಗಿ ಬಂದಂತಹ ಒಂದು ಧಾರಣೆ ಇದೆ. ಮಸೀದಿ ಮದ್ರಸಗಳಲ್ಲಿ ಕಲಿಯುವಂತಹದ್ದು ಧಾರ್ಮಿಕ; ಶಾಲೆ - ಕಾಲೇಜುಗಳಲ್ಲಿ ಕಲಿಯುವಂತಹದ್ದು ಲೌಕಿಕ. ಆದರೆ ಈ ವಿಂಗಡನೆ ಅಷ್ಟು ಸಮಂಜಸವಲ್ಲ. ಯಾಕೆಂದರೆ ಧಾರ್ಮಿಕ ವಲಯದಲ್ಲಿರುವ ಪ್ರಾಥಮಿಕ ಶಿಕ್ಷಣದ ನಂತರ ದರ್ಸ್ ಮತ್ತು ಅರಬಿಕ್ ಕಾಲೇಜ್ ಗಳ ಪಠ್ಯಪುಸ್ತಕಗಳನ್ನು ಅವಲೋಕಿಸಿದಾಗ ಅದರಲ್ಲಿ ಬರುವ ಅಧ್ಯಯನ ವಿಷಯಗಳು ಮತ್ತು ಶಾಲಾ ಕಾಲೇಜ್ ಗಳಲ್ಲಿ ಕಲಿಸುವ ಪಠ್ಯ ಪುಸ್ತಕಗಳ ಅಧ್ಯಯನ ವಿಷಯಗಳು ಒಂದೇ ಆಗಿವೆ ಎಂಬುದನ್ನು ಊಹಿಸಬಹುದು. ಉದಾಹರಣೆಗೆ : ದರ್ಸ್ ಗಳಲ್ಲಿ ಕಲಿಸುವ ಖುಲಾಸತುಲ್ ಹಿಸಾಬ್, ಉಕ್ಲದೀಸ್, ಶರಹುತಹ್ ದೀಬ್ ಮುಂತಾದ ಪಠ್ಯ ಪುಸ್ತಕಗಳು, ಅಂಕಗಣಿತ, ರೇಖಾಗಣಿತ, ವ್ಯೋಮ ಶಾಸ್ತ್ರ, ತರ್ಕಶಾಸ್ತ್ರ (logic) ಮುಂತಾದ ಅಧ್ಯಯನ ವಿಷಯಗಳನ್ನು ಒಳಗೊಂಡಿವೆ. ಫಿಕ್ಹ್ ಗ್ರಂಥಗಳಲ್ಲಿ ಬರುವ ಝಕಾತ್, ಫರಾಯಿಳ್ ಮುಂತಾದ ಅಧ್ಯಾಯಗಳನ್ನು ಗಣಿತ ಇಲ್ಲದೆ ಓದಲು ಸಾಧ್ಯವೇ ಇಲ್ಲ. ಅದೇ ರೀತಿ ವ್ಯಾಪಾರ, ಸಾಲ, ಎರವಲು ಪಡೆಯುವುದು, ಬಡ್ಡಿಯ ಕುರಿತ ಲೋಪದೋಷಗಳು, ಲಾಭ ಮುಂತಾದ ವಿಷಯಗಳು, ಫಿಕ್ಹ್ ಗ್ರಂಥದ ಕೇಂದ್ರ ಬಿಂದುಗಳು. ಇದು ಕಾಲೇಜುಗಳಲ್ಲಿ ಕಲಿಸುವ ಕಾಮರ್ಸ್, ಇಕಾನಾಮಿಕ್ಸ್ ಮುಂತಾದ ವಿಷಯಗಳನ್ನು ಒಳಗೊಂಡಿವೆ. ಒಟ್ಟಿನಲ್ಲಿ ಇಸ್ಲಾಮೀ ಗ್ರಂಥಗಳು ಇಂದಿನ ಎಲ್ಲಾ ಶಿಕ್ಷಣ ಶಾಖೆಗಳ ಮೂಲ. ವಿಜ್ಞಾನ ಶಾಖೆಗಳು ಹರಡಿದಂತೆಲ್ಲಾ ಶಿಕ್ಷಣದ ಮುಖಗಳು ಬೇರೆ ಬೇರೆಯಾದವು. 1. ಪ್ರಾಸಂಗಿಕ ಶಿಕ್ಷಣ 2. ಔಪಚಾರಿಕ ಶಿಕ್ಷಣ 3. ಅನೌಪಚಾರಿಕ ಶಿಕ್ಷಣ ಹೀಗೆ ಹಂತ ಹಂತವಾಗಿ ಬೇರ್ಪಟ್ಟು ಒಂದೊಂದು ವರ್ಗದ ಹಿತಾಸಕ್ತಿಯಾಗಿ ರೂಪುಗೊಂಡಿತು.

ಭಾರತವನ್ನು ಆಳಿದ ಮುಸಲ್ಮಾನರ ಆಡಳಿತ ಕಾಲದಲ್ಲಿ ಶಿಕ್ಷಣ ಹೇಗಿತ್ತು ಎಂದು ಚರಿತ್ರೆ ತಿಳಿಸುತ್ತದೆ. ಚರಿತ್ರೆಕಾರನಾದ ಫಿರಿಷ್ಟ ಹೇಳಿರುವಂತೆ;

ಸುಮಾರು ಹತ್ತನೆಯ ಶತಮಾನಾನಂತರ ಮುಸ್ಲಿಮ್ ಆಡಳಿತಗಾರರು ಭಾರತಕ್ಕೆ ಬಂದು ನೆಲಸಿದರು. ಅನೇಕ ಮಸೀದಿಗಳನ್ನು ಕಟ್ಟಿಸಿದರು. ಪಟ್ಟಣಗಳಲ್ಲಿ ಮಸೀದಿಗಳೇ ಶಿಕ್ಷಣ ಕೇಂದ್ರಗಳಾಗಿದ್ದವು. ಪಠ್ಯ ವಿಷಯ ಪಟ್ಟಿಯಲ್ಲಿ ಕೆಲವು ವೇಳೆ, ಓದುವುದು, ಬರವಣಿಗೆ ಹಾಗೂ ಗಣಿತವನ್ನು, ಅಧ್ಯಯನ ವಿಷಯದಂತೆ ಸೇರಿಸುತ್ತಿದ್ದರು. ಈ ಶಿಕ್ಷಣ ಕೇಂದ್ರಗಳನ್ನು 'ಮಕ್ತಬ್' ಅಥವಾ 'ಮದ್ರಸ'ಗಳೆಂದು ಕರೆಯುತ್ತಿದ್ದರು. ಸಾಮಾನ್ಯವಾಗಿ 'ಮಕ್ತಬ್'ಗಳೆಂದರೆ ಪ್ರೈಮರಿ ಶಾಲೆ ಮತ್ತು 'ಮದ್ರಸ'ಗಳೆಂದರೆ ಉಚ್ಚ ಶಿಕ್ಷಣ ನೀಡುವ ಪ್ರೌಢಶಾಲೆಯಾಗಿತ್ತು. ಭಾರತಕ್ಕೆ ದಂಡೆತ್ತಿ ಬಂದ ಮುಸಲ್ಮಾನ ಸುಲ್ತಾನರು ಮಸೀದಿಗಳನ್ನೂ, ಮದ್ರಸಗಳನ್ನು ಕಟ್ಟಿಸುವುದರಲ್ಲಿ ಉತ್ಸಾಹಭರಿತರಾಗಿದ್ದರು. ತುಘ್ಲಕರ ಸಂತತಿಯವರ ಆಳ್ವಿಕೆಯ ವೇಳೆಗೆ ಮುಸ್ಲಿಮರ ಶಿಕ್ಷಣವು ಬಹುಮಟ್ಟಿಗೆ ಪ್ರಗತಿಪರವಾಗಿತ್ತು. ನವದೆಹಲಿಯನ್ನು ಸ್ಥಾಪಿಸಿದ ಫಿರೋಜ್ ಶಹ ತುಘ್ಲಕನು ಅದನ್ನು (ಫಿರೋಜ್ ಬಾದ) ಒಂದು ಪ್ರಖ್ಯಾತ ಸಾಹಿತ್ಯ ಪ್ರಸಾರ ಕೇಂದ್ರವನ್ನಾಗಿ ಮಾಡಿದರು. ಮಸೀದಿಗಳಿಗೆ ಸೇರಿದಂತೆ ಸುಮಾರು ಮೂವತ್ತು ಕಾಲೇಜುಗಳಿದ್ದವೆಂದು ಚರಿತ್ರೆ ಹೇಳುತ್ತಿದೆ. ರಾಜಧಾನಿಯಾದ ದೆಹಲಿಯಲ್ಲಿದ್ದ ಕಾಲೇಜಿನಲ್ಲಿ ಒಂದೇ ಸಂಸ್ಥೆಯಲ್ಲಿ ಪ್ರಾಧ್ಯಾಪಕರೂ, ವಿದ್ಯಾರ್ಥಿಗಳೂ ಒಟ್ಟಿಗೆ ವಾಸಿಸುತ್ತಿದ್ದರು. ಮುಹಮ್ಮದೀಯರು ಶಿಕ್ಷಣದಲ್ಲಿ ಬಹಳ ಮಟ್ಟಿಗೆ ಮುಂದುವರಿದಿದ್ದರು. ಈ ಶಿಕ್ಷಣ ಶಾಲೆಗಳು ಕೇವಲ ಮುಹಮ್ಮದೀಯರಿಗೆ ಮೀಸಲಾಗಿದ್ದವು. ಕಾಲಕ್ರಮದಲ್ಲಿ ಮುಹಮ್ಮದೀಯರೂ, ಹಿಂದುಗಳೂ ಒಬ್ಬರ ಭಾಷೆಯನ್ನು ಮತ್ತೊಬ್ಬರು ಕಲಿಯಲು ಪ್ರಾರಂಭಿಸಿದರು. ಈ ಸಂಪರ್ಕದಿಂದ ಅರಬಿ ಮತ್ತು ಪಾರ್ಸಿ ಭಾಷೆ ಬೆರೆತು ಉರ್ದು ಎಂಬ ಹೊಸಭಾಷೆಯ ಸೃಷ್ಟಿಯಾಯಿತು.

ಚರಿತ್ರೆ, ತೆರೆದಿಡುವ ಈ ಸತ್ಯಸಂಗತಿ ಶಿಕ್ಷಣದ ಮೂಲ ಮಸೀದಿ-ಮದರಸಗಳಿಂದ ಪ್ರಾರಂಭವಾಯಿತೆಂದೂ ಅದು ಶಾಲಾ ಕಾಲೇಜುಗಳಿಗೆ ಕ್ರಮೇಣ ಹರಡಿತೆಂದೂ ತಿಳಿದುಬರುತ್ತದೆ.

ಆದುದರಿಂದ ಶಿಕ್ಷಣವನ್ನು ಧಾರ್ಮಿಕ ಮತ್ತು ಲೌಕಿಕ ಎಂಬ ವಿಂಗಡನೆಗೆ ಒಳಪಡಿಸದೆ ಇವೆರಡೂ ಬ್ಯಾರಿಗಳ ಆಧ್ಯಾತ್ಮಿಕ ಜೀವನ ಮತ್ತು ಲೌಕಿಕ ಜೀವನದ ವಾಸ್ತವಿಕತೆಗೆ ಪರಸ್ಪರ ಪೂರಕ ಎಂದು ತಿಳಿಯತಕ್ಕದ್ದು. ಬ್ಯಾರಿಗಳ ಜೀವನದಲ್ಲಿ ಇಸ್ಲಾಂ ಒಂದು ಅಧ್ಯಯನ ವಿಷಯವಾಗಿರಬೇಕು. ಅದಕ್ಕೆ ಪೂರಕವಾಗುವಂತಹ ಯಾವ ಶಿಕ್ಷಣ ದೊರೆಯುತ್ತದೋ ಅದನ್ನೆಲ್ಲಾ ಪಡೆಯಲು ಆತ ಸನ್ನದ್ಧನಾಗಿರಬೇಕು.

**d. ಕಲಿಕೆ ಮತ್ತು ಗಳಿಕೆ ಇವೆರಡರ ಸಂಬಂಧ:** ಇಲ್ಲಿ ಕೂಡ ಬ್ಯಾರಿಗಳು ತಮ್ಮ ಧೋರಣೆಯಲ್ಲಿ ಸಾರ್ವತ್ರಿಕವಾಗಿ ಎಡವಿದ್ದಾರೆ ಎಂದು ಅನಿಸುತ್ತಿದೆ. ಯಾಕೆಂದರೆ ಬ್ಯಾರಿಗಳಲ್ಲಿ ಸಾಮಾನ್ಯವಾದ ಒಂದು ಪ್ರಶ್ನೆ ಇದೆ. ಕಲಿತು ಏನು ಮಾಡುವುದು? ಅಂದರೆ ವಿದ್ಯಾವಂತರಾದಂತೆ ಇಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದಂತೆ. ಇದು ಸರಿ ಅಲ್ಲ. ವಿದ್ಯಾವಂತರಾಗದಿದ್ದರೂ ನಿರುದ್ಯೋಗ ಸಮಸ್ಯೆ ಇದೆ. ಆದಕಾರಣ ಶಿಕ್ಷಣದಿಂದ ನಿರುದ್ಯೋಗ ಸಮಸ್ಯೆ ಉಂಟಾದದ್ದಲ್ಲ. ಇಲ್ಲಿ ಒಂದು ತಾತ್ವಿಕ ಪ್ರಶ್ನೆಯನ್ನು ಮುಂದಿಡುತ್ತೇನೆ.

ಒಬ್ಬ ಆರೋಗ್ಯವಂತ ಯುವಕ ಶಿಕ್ಷಣ ಪಡೆದು ಪದವಿ ಮುಗಿಸಿದ ಅಂತಿಟ್ಟುಕೊಳ್ಳೋಣ. ತಕ್ಷಣ ಆತನಿಗೆ ತನ್ನ ಪದವಿಗೆ ಅನುಸಾರವಾದ ಹುದ್ದೆ ಸಿಗಲಿಲ್ಲ. ಪದವಿಗೆ ಅನುಸಾರವಲ್ಲದ ಹುದ್ದೆ ಸಿಕ್ಕಿದರೆ ಮಾಡಬೇಕೇ ಬೇಡವೇ? ಆತನದ್ದು ನಿಜವಾದ ಸುಸಂಸ್ಕೃತ ಶಿಕ್ಷಣವಾಗಿದ್ದರೆ ಆತ ಯಾವ ಹುದ್ದೆಯನ್ನೂ ಮಾಡುತ್ತಾನೆ ಮತ್ತು ಹಂತಹಂತವಾಗಿ ಮೇಲೇರಲು ಪ್ರಯತ್ನಿಸುತ್ತಾನೆ. ಇಲ್ಲದಿದ್ದರೆ ಆತ ಹಿಂಜರಿದು ಸ್ವತಃ ನಿರುದ್ಯೋಗಿಯಾಗುತ್ತಾನೆ. ಇಲ್ಲಿ ಉದ್ಯೋಗವೆಂಬುದು ಶಿಕ್ಷಣದ ಒಂದು ಸಾಧ್ಯತೆ ಅಷ್ಟೇ. ಆತ ಶಿಕ್ಷಿತನಾದಷ್ಟೂ ತನ್ನ ವಲಯದಲ್ಲಿ ಕಾರ್ಯಕ್ಷಮತೆಯನ್ನೂ, ಪ್ರಾಮಾಣಿಕತೆಯನ್ನೂ, ಸಹನೆಯನ್ನೂ ತೋರಿಸುತ್ತಾನೆ. ಪೈಪೋಟಿಯನ್ನು ಎದುರಿಸುತ್ತಾನೆ.

ಒಟ್ಟಿನಲ್ಲಿ ಶಿಕ್ಷಣ ಒಂದು ಸುಸಂಸ್ಕೃತ ಸಮುದಾಯವನ್ನು ರೂಪಿಸುತ್ತದೆ. ಉದ್ಯೋಗ ಇರಲಿ, ಇಲ್ಲದಿರಲಿ, ಬಡತನವಿರಲಿ, ಶ್ರೀಮಂತಿಕೆ ಇರಲಿ. ಒಂದು ಸಮುದಾಯ ಸಂಪೂರ್ಣ ಶಿಕ್ಷಿತವಾದರೆ ಅದರ ಲಾಭ ಹೇಗೆ ಎಂಬುದನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು.

1. ಸಮುದಾಯದ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವುದು.
2. ಸಮುದಾಯದ ಮನಸ್ಸು ಹದಗೊಳ್ಳುವಂತೆ-ಬೆಳೆಸುವುದು.
3. ರಾಷ್ಟ್ರೀಯ ಅಭಿರುಚಿಗಳನ್ನು ಪರಿಶುದ್ಧಗೊಳಿಸುವುದು.
4. ಪ್ರಮುಖವಾದ ಆಶೋತ್ತರಗಳಿಗೆ ವಾಸ್ತವಿಕ ತತ್ವಗಳನ್ನು ಒದಗಿಸುವುದು.
5. ರಾಜಕೀಯ ಶಕ್ತಿಯನ್ನು ಬಳಸಲು ಸೌಕರ್ಯಗಳನ್ನು ಒದಗಿಸುವುದು.
6. ಖಾಸಗೀ ಜೀವನ ವ್ಯವಹಾರ ಉತ್ತಮಗೊಳ್ಳುವಂತೆ ಮಾಡುವುದು.
7. ಧಾರ್ಮಿಕ ಆಚರಣೆಗಳಲ್ಲಿ ಮೂಢನಂಬಿಕೆಗಳನ್ನು ತೊಲಗಿಸುವುದು.

ಆಧುನಿಕ ಜಗತ್ತು ಕೈಗಾರಿಕೀಕರಣ ಮತ್ತು ಕಂಪ್ಯೂಟರೀಕರಣ ಹೊಂದಿ ಹೆಚ್ಚು ಹೆಚ್ಚು ಮೌನವಾಗುತ್ತದೆ. ಒಂದು ರೀತಿಯಲ್ಲಿ ಮನುಷ್ಯ ಮೌನವಾಗುತ್ತಿದ್ದಾನೆ. ತನ್ನ ಚಿಂತನೆಯನ್ನೂ, ಅಭಿವ್ಯಕ್ತಿಯನ್ನೂ ಯಂತ್ರಗಳಿಗೆ ಒಪ್ಪಿಸಿ ನಿರುಮ್ಮಳನಾಗಿದ್ದಾನೆ. ಕಸುಬು, ಉದ್ಯೋಗವೆಂಬುದು ಕ್ರಮೇಣ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳುವ ಅಪಾಯವಿದೆ. ಆದರೆ ಬ್ಯಾರಿಗಳನ್ನು ನಿರಂತರ ಚಟುವಟಿಕೆಗಳಲ್ಲಿಡುವ ಒಂದು ಆರಾಧನಾ ಕ್ರಮವಿದೆ. ಅದನ್ನು ಯಂತ್ರಕ್ಕೊಪ್ಪಿಸಲು ಸಾಧ್ಯವೇ ಇಲ್ಲ. ಅಂದರೆ ಬ್ಯಾರಿಯ ಬುದ್ಧಿ ಸದಾ ಜಾಗ್ರತವಾಗಿರುತ್ತದೆ. ಇಸ್ಲಾಂ ಮತ್ತು ಕುರಾನ್ ಎಂಬ ವಾಸ್ತವಿಕ ಅಧ್ಯಯನಗಳು ಇರುವ ತನಕ ಬ್ಯಾರಿ ಲವಲವಿಕೆಯಿಂದಿರುತ್ತಾನೆ.

**3. ಸಾಮಾಜಿಕ ಸಮಸ್ಯೆಗಳು :** ಬ್ಯಾರಿ ಸಮುದಾಯದ ಸ್ವಯಂಕೃತ ಸಮಸ್ಯೆಗಳಲ್ಲಿ ಸಾಮಾಜಿಕ ಸಮಸ್ಯೆಗಳು ಹಲವಾರು. ಇಂದಿನ ಸ್ಥಿತಿಗತಿಗಳ ಕುರಿತು ಮಾತ್ರ ಅವಲೋಕಿಸಿದರೆ ಈ ಕೆಳಗಿನ ಸಮಸ್ಯೆಗಳನ್ನು ತಟ್ಟನೆ ಗುರುತಿಸಬಹುದು.

**1. ವರದಕ್ಷಿಣೆ :** ಬ್ಯಾರಿ ಸಮುದಾಯದ ಎಲ್ಲಾ ಸಮಸ್ಯೆಗಳು ಇದರ ಸುತ್ತ ತಿರುಗುತ್ತಿದೆ. ಹಲವಾರು ವರ್ಷಗಳಿಂದ ವರದಕ್ಷಿಣೆಯ ವಿರುದ್ಧ ಸಾಹಿತ್ಯಗಳು, ಭಾಷಣಗಳು, ಸೆಮಿನಾರ್‌ಗಳು, ಶಪಥಗಳು ನಡೆದಿವೆ. ನಡೆಯುತ್ತಾ ಇವೆ. ಆದರೂ ಈ ಪಿಡುಗು ನಮ್ಮ ಸಮುದಾಯವನ್ನು ಬಿಟ್ಟು ತೊಲಗಲೇ ಇಲ್ಲ. ಹಣದ ರೂಪದ್ದು ಚಿನ್ನದ ರೂಪಕ್ಕೊ, ಚಿನ್ನದ ರೂಪದ್ದು ವಾಹನಗಳ ರೂಪಕ್ಕೊ, ವಾಹನದ ರೂಪದ್ದು, ವೀಸದ ರೂಪಕ್ಕೊ, ವೀಸದ ರೂಪದ್ದು ರಿಯಲ್ ಎಸ್ಟೇಟ್ ರೂಪಕ್ಕೊ ರೂಪಾಂತರ ಹೊಂದುತ್ತಾ ವರದಕ್ಷಿಣೆ ತನ್ನ ಕರಾಳ ಹಸ್ತವನ್ನು ಚಾಚುತ್ತಾ ಇದೆ. ಇನ್ನೊಂದು ಹೆಜ್ಜೆ ಮುಂದೆ ಹೋದರೆ ವರದಕ್ಷಿಣೆಗಾಗಿ ಕೊಳ್ಳೆ, ದರೋಡೆ, ಆಕ್ರಮಣ ಮುಂತಾದವುಗಳೂ ಪಡೆಯಬಹುದು.

ವರದಕ್ಷಿಣೆಯ ಈ ಪಿಡುಗು ಒಂದು ಬ್ಯಾರಿ ಹೆಣ್ಣುಮಗಳ ಜೀವನವನ್ನು ಹೇಗೆ ತಿರುಚುತ್ತದೆ ಎಂಬುದಕ್ಕೆ ಒಂದು ಉದಾಹರಣೆ ತೆಗೆದುಕೊಳ್ಳೋಣ.

ಐದಾರು ಜನರ ಒಂದು ಬಡ ಬ್ಯಾರಿ ಕುಟುಂಬ. ಆ ಬ್ಯಾರಿ ಕುಟುಂಬದ ಯಜಮಾನನ ಮುಂದಿರುವ ದೊಡ್ಡ ಸಮಸ್ಯೆ ತನ್ನ ಮೂರು ಹೆಣ್ಣು ಮಕ್ಕಳ ಮದುವೆ. ಇದು ಆ ಕುಟುಂಬದ ಒಟ್ಟು ಸಮಸ್ಯೆ. ಆ ಕುಟುಂಬದ ವರಮಾನ ಮಾರ್ಗ ಕೂಲಿ ಮತ್ತು ಬೀಡಿ ಕಟ್ಟುವುದು. ಇಂದಿನ ಪರಿಸ್ಥಿತಿಯಲ್ಲಿ ಆ ಕುಟುಂಬದ ಒಟ್ಟು ಮಾಸಿಕ ಆದಾಯ 2500-3500 ಅಂತಿಟ್ಟುಕೊಳ್ಳೋಣ. ಆ ಕುಟುಂಬದ ಮಾಸಿಕ ಉದರಂಭರಣೆಗಾಗಿ ಮಾತ್ರ ಆಗುವ ಖರ್ಚಿಗೆ ಕೂಡ ಈ ಮೊತ್ತ ಸಾಕಾಗುವುದಿಲ್ಲ. ಆದರೂ ಇಲ್ಲೊಂದು ವಿಲಕ್ಷಣ ಚಟುವಟಿಕೆಗಳನ್ನು ಗಮನಿಸಬಹುದು. ಒಂದನೆಯದಾಗಿ ಆರೋಗ್ಯವನ್ನು ಕ್ರಮೇಣ ಹಾಳುಮಾಡುವ ಬೀಡಿ ಉದ್ಯಮವನ್ನು ಅವಲಂಬಿಸಿರುವುದು. ಎರಡನೆಯದಾಗಿ ಅದರಿಂದ ಬರುವ ಮಜೂರಿಯಲ್ಲಿ ಹೊಟ್ಟೆಗೆ ತಿನ್ನದೆ ಶೇಕಡ 50ನ್ನು ಚಿನ್ನಾಭರಣಗಳಿಗಾಗಿ ಬ್ಯಾರಿ ಹೆಣ್ಣು ಮಕ್ಕಳು ಕೂಡಿಡುವುದು. 25%ನ್ನು ವರದಕ್ಷಿಣೆಗಾಗಿ ಕೂಡಿಡುವುದು. ಉಳಿದ 25ರಲ್ಲಿ 12.5%ನ್ನು ಬೀಡಿಯಿಂದಾಗಿ ಬಂದ ಅನಾರೋಗ್ಯ ಮತ್ತು ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳು ಸಿಗದೆ ಬರುವ ಖಾಯಿಲೆಗಾಗಿ ಉಪಯೋಗಿಸುವುದು. ಇದೊಂದು ಹೃದಯ ವಿದ್ರಾವಕ ಘಟನೆ. ಇದು ಕೇವಲ ಮದುವೆಗಾಗಿ ಮತ್ತು ವರದಕ್ಷಿಣೆಗಾಗಿ ತಮ್ಮನ್ನು ಪೀಡಿಸುವ ವೃತ್ತಾಂತ. ಈಗ ನೋಡಿ ಬ್ಯಾರಿ ಸಮುದಾಯದ ಆರ್ಥಿಕ ವ್ಯವಸ್ಥೆ ಕೇವಲ ವರದಕ್ಷಿಣೆಯ ಸುತ್ತು ಸುತ್ತುತ್ತಿದೆ. ಇದೇ ಸಿದ್ಧಾಂತ ಬಡವರಲ್ಲಿಯೂ, ಮಧ್ಯಮ ವರ್ಗದಲ್ಲಿಯೂ ಹೆಚ್ಚೇಕೆ ಶ್ರೀಮಂತ ವರ್ಗದಲ್ಲಿಯೂ ನಡೆಯುವಂತದ್ದೇ. ಬಡವರಿಗೆ ಐವತ್ತು ಸಾವಿರದ ಸಮಸ್ಯೆ ಶ್ರೀಮಂತರಿಗೆ ಐದು ಲಕ್ಷದ ಸಮಸ್ಯೆ. ಸಂಪತ್ತನ್ನು ದುರ್ವಿನಿಯೋಗಗೊಳಿಸಲು ಅತ್ಯಂತ ಸುಲಭದ ದಾರಿ ಈ ವರದಕ್ಷಿಣೆ. ವರದಕ್ಷಿಣೆ ಕೊಟ್ಟು ವಿವಾಹ ಮಾಡಿದ ಸ್ವಲ್ಪ ಸಮಯದಲ್ಲೇ ಹಿರಿಯರು ''ಮಗಳಿಗೆ ಹಾಕಿದ ಚಿನ್ನವನ್ನು ಮುಕ್ಕಿ ತಿಂದು'' ಈಗ ಅಳಿಯ ಮನೆಯಲ್ಲಿದ್ದಾನೆ ಎಂಬ ಹತಾಶೆಯ ಬೊಬ್ಬೆ ಹೊಡೆಯುತ್ತಾರೆ. ಇದರ ಅರ್ಥ ವರದಕ್ಷಿಣೆ ಕೊಟ್ಟು ಯಾರೂ ಕೂಡ ತಮ್ಮ ಮಗಳನ್ನೋ, ಅಳಿಯನನ್ನೋ ಉದ್ಧಾರ ಮಾಡಲಿಲ್ಲ ಎಂದಾಗುತ್ತದೆ. ಇದು ವಾಸ್ತವ ಕೂಡ. ಒಂದು ಅವಾಸ್ತವಿಕವೂ, ಅವೈಜ್ಞಾನಿಕವೂ ಆದ ತಳಹದಿಯ ಮೇಲೆ ಪ್ರಗತಿಯ ಕಟ್ಟಡ ನಿಲ್ಲುವುದಿಲ್ಲ.

ಏನೇ ಇರಲಿ, ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು. ಇದು ಸಮುದಾಯದ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ.

**2. ವಿದ್ಯಾಭ್ಯಾಸ :** ಬ್ಯಾರಿ ಸಮುದಾಯದಲ್ಲಿ ಒಂದು ನಿರ್ದಿಷ್ಟ ವಯೋಮಿತಿಯವರೆಗಿನ ಬ್ಯಾರಿಗಳನ್ನು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಈ ರೀತಿ ವರ್ಗೀಕರಿಸಬಹುದು.

ಶಾಲೆಗೆ ಸಂಬಂಧಿಸಿದಂತೆ :

1. ಶಾಲೆಗೆ ಹೋಗದಿರುವ 6-14 ವಯಸ್ಸಿನ ಮಕ್ಕಳು
2. ಶಾಲೆಯನ್ನು ಮಧ್ಯದಲ್ಲೇ ಬಿಟ್ಟಿರುವ 6-14 ವಯಸ್ಸಿನ ಮಕ್ಕಳು.
3. 15-25 ವಯಸ್ಸಿನ ಅರೆ ಸಾಕ್ಷರರು ಮತ್ತು ಅನಕ್ಷರಸ್ಥರು.
4. ಶಾಲೆಯನ್ನು ಬಿಟ್ಟಿರುವ 15-25 ವಯಸ್ಸಿನ ಅಕ್ಷರಸ್ಥರು.

ಮದ್ರಸ ಮತ್ತು ದರ್ಸಿಗೆ ಸಂಬಂಧಿಸಿದಂತೆ : (ವಯಸ್ಸು ಪರಿಗಣನೆಗೆ ಇಲ್ಲ)

1. ಒಂದರಿಂದ ಐದನೇ ತರಗತಿವರೆಗೆ ಕಲಿತವರು.
2. ಒಂದರಿಂದ ಏಳನೇ ತರಗತಿವರೆಗೆ ಕಲಿತವರು.
3. ಮದ್ರಸದಿಂದ ದರ್ಸ್ ಅಥವಾ ಅರಬಿಕ್ ಕಾಲೇಜ್‌ಗಳಿಗೆ ಸೇರ್ಪಡೆಯಾದವರು. (ಇವರು ಸಾಮಾನ್ಯವಾಗಿ ಶಾಲೆ ಬಿಟ್ಟಿರುತ್ತಾರೆ).
4. ಅರಬಿಕ್ ಕಾಲೇಜಿನ ಪದವಿ ಪಡೆದವರು ಮತ್ತು ಪಡೆಯದವರು.

ಹೀಗೆ ಪ್ರತಿಯೊಂದನ್ನು ವರ್ಗೀಕರಿಸುತ್ತಾ ಹೋದಂತೆ ಸಮುದಾಯದ ನಿಚ್ಚಳ ಚಿತ್ರಣ ಸಿಗುತ್ತದೆ. ಒಂದು ಸಮೀಕ್ಷೆಯ ಪ್ರಕಾರ 6-10 ವರ್ಷದವರೆಗಿನ ಮಕ್ಕಳು 36.42% ಮತ್ತು 11-13 ವರ್ಷದ ವರೆಗಿನ ಮಕ್ಕಳು 38.46% ಮಾತ್ರ ಶಾಲೆ ಕಲಿಯುತ್ತಿದ್ದಾರೆ. ಅಂದರೆ ಪ್ರಾಥಮಿಕ ಶಿಕ್ಷಣದಿಂದಲೇ ವಂಚಿತರಾದ ಮಕ್ಕಳೇ ನಮ್ಮ ಸಮುದಾಯದಲ್ಲಿ 62.56% ದಷ್ಟಿದ್ದಾರೆ. ಶೇಕಡಾ ನೂರರಷ್ಟು ಸಾಕ್ಷರತೆಗೆ ಇನ್ನಷ್ಟು ಕಾಲಾವಕಾಶಬೇಕು.

ಅಂಕಿ ಅಂಶಗಳು ಹೀಗಿದ್ದರೂ ಬ್ಯಾರಿ ಸಮುದಾಯದಲ್ಲಿ ಇತ್ತೀಚೆಗೆ ಬೆಳವಣಿಗೆ ಕಾಣುತ್ತಿದೆ. ಮಕ್ಕಳನ್ನು ಶಾಲೆಗೆ ಮತ್ತು ಮದರಸಗಳಿಗೆ ಕಳುಹಿಸಲು ಉತ್ಸಾಹ ತೋರಿಸುತ್ತಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಉನ್ನತ ವಿದ್ಯಾಭ್ಯಾಸದ ಬಗ್ಗೆ ಯಾರಿಗೂ ಗಮನವಿಲ್ಲ. ಇನ್ನೊಂದು ಅಂಕಿ ಅಂಶದ ಪ್ರಕಾರ ಒಟ್ಟು ಅಲ್ಪಸಂಖ್ಯಾತರ 10,000 ಮಂದಿಗಳಲ್ಲಿ 6 ಡಾಕ್ಟರ್ ಮತ್ತು 5 ಇಂಜಿನಿಯರ್‌ರರು ಮಾತ್ರ ಇದ್ದಾರೆ. ಅಂದರೆ ಉನ್ನತ ವಿದ್ಯಾಭ್ಯಾಸ ಕೇವಲ ಮರೀಚಿಕೆಯಾಗಿ ಉಳಿದಿದೆ.

ಮೇಲಿನ ವರ್ಗೀಕರಣ, ಅಂಕಿಅಂಶಗಳನ್ನು ಪರಿಶೀಲಿಸಿದಾಗ ನಮಗೆ ಮುಖ್ಯವಾಗಿ ಶಾಲೆ, ಕಾಲೇಜು, ಮದ್ರಸ, ದರ್ಸ್, ಅರಬಿಕ್ ಕಾಲೇಜು ಮುಂತಾದ ಶಿಕ್ಷಣ ಕೇಂದ್ರಗಳು ಬ್ಯಾರಿಗಳನ್ನು ಪೂರ್ಣವಾಗಿ ಆಕರ್ಷಿಸಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ಶಿಕ್ಷಣದ ಯೋಜನೆಯಲ್ಲಿ ಏಕರೂಪತೆ ಇಲ್ಲದಿರುವುದು. ಒಂದೇ ಕಡೆ ಎಲ್ಲವನ್ನೂ ನೀಡುವ ಕಾರ್ಯಯೋಜನೆ ರೂಪಗೊಂಡರೆ ಈ ಕೊರತೆಯನ್ನು ನೀಗಿಸಬಹುದಿತ್ತು. ಆ ನಿಟ್ಟಿನಲ್ಲಿ ಬ್ಯಾರಿ ಸಮುದಾಯ ಎಚ್ಚೆತ್ತುಕೊಳ್ಳಬೇಕು.

ಇಲ್ಲಿ ಮಕ್ಕಳ ಶಿಕ್ಷಣ, ಮಹಿಳೆಯರ ಶಿಕ್ಷಣ, ಪುರುಷರ ಶಿಕ್ಷಣ ಎಂದು ವರ್ಗೀಕರಿಸುವುದು ತರವಲ್ಲ. ಸಮುದಾಯದ ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ ಅತ್ಯಗತ್ಯ. ಸಮುದಾಯದ ಎಲ್ಲಾ ಸಮಸ್ಯೆಗಳನ್ನು ತಿಳಿಯಲು ಕೂಡ ವಿದ್ಯಾಭ್ಯಾಸದ ಅಗತ್ಯವಿದೆ. ಸಮಸ್ಯೆ ಏನೆಂದು ತಿಳಿಯದಿದ್ದರೆ ಪರಿಹಾರ ಕಂಡು ಹುಡುಕುವ ಗೋಜಿಗೆ ಅತ ಹೋಗುವುದಿಲ್ಲ.

**C. ನಿರುದ್ಯೋಗ :** ಇದೊಂದು ಸಾಮಾಜಿಕ ಸಮಸ್ಯೆಯಾದರೂ ಇದನ್ನು ಮನೋ ವೈಜ್ಞಾನಿಕವಾಗಿಯೇ ವಿಶ್ಲೇಷಿಸಬೇಕಾಗುತ್ತದೆ. ಯಾಕೆಂದರೆ ಉದ್ಯೋಗ ಅಂದಕೂಡಲೇ ಇನ್ನೊಂದು ಪ್ರಶ್ನೆ ತಟ್ಟನೆ ಬರುತ್ತದೆ ಸಂಬಳ. ಕಡಿಮೆ ಸಂಬಳಕ್ಕೆ ಕೆಲಸ ಮಾಡುವುದಿದ್ದರೆ ಎಷ್ಟು ಕೆಲಸಬೇಕಾದರೂ ಇದೆ. ಆದರೆ ಅದಕ್ಕೆ ತಯಾರಿಲ್ಲ. ಮನೆಯಲ್ಲಿ ಸೋಮಾರಿಯಾಗಿ ಕುಳಿತರೂ ಆಗಬಹುದು ಕಡಿಮೆ ಸಂಬಳಕ್ಕೆ ದುಡಿಯುವುದಿಲ್ಲ ಎಂದು ನಮ್ಮ ಸಮುದಾಯದ ಅನೇಕರು ಪ್ರತಿಜ್ಞೆಮಾಡಿದಂತಿದೆ. ಇನ್ನೊಂದು ಮೊದಲೇ ಹೇಳಿದಂತೆ ಕಲಿಕೆಗೆ ತಕ್ಕ ಗಳಿಕೆ ಇಲ್ಲದಿರುವುದು. ಈ ನಿಲುವು ಬದಲಾಗಬೇಕು. ಇರುವ ಉದ್ಯೋಗವನ್ನು ಸಿಗುವ ಸಂಬಳಕ್ಕಾದರೂ ಮಾಡಿ ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಹಂತ ಹಂತವಾಗಿ ಮೇಲೇರಬೇಕು. ಬ್ಯಾರಿಗಳ ಹಳೆಯ ಕಾಲದ ಚರಿತ್ರೆ ನೋಡಿದರೆ ಬ್ಯಾರಿಗಳು ಎಲ್ಲಾ ಕೆಲಸವನ್ನು ಮಾಡುವವರಾಗಿದ್ದರು. ಸಾಹಸಿಗಳು, ಧೀರರೂ, ಪ್ರಾಮಾಣಿಕರೂ ಆಗಿದ್ದರು. ಇಂದಿನ ಬ್ಯಾರಿಗಳಲ್ಲಿ ಆತ್ಮಸ್ಥೈರ್ಯ ಮನೋಭಾವನೆ ಇನ್ನಷ್ಟು ಹೆಚ್ಚಬೇಕು.

ವಸ್ತುಸ್ಥಿತಿ ಬೇರೊಂದಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾವಂತ ಬ್ಯಾರಿ ಯುವಕನೊಬ್ಬ ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಕ್ಷೇತ್ರದಲ್ಲಿ ಒಂದು ಉದ್ಯೋಗ ಗಳಿಸಲು ಸಾಕಷ್ಟು ತ್ರಾಸಪಡಬೇಕಾಗಿದೆ.

**4. ಆರ್ಥಿಕ ಸಮಸ್ಯೆಗಳು :** ಬ್ಯಾರಿಗಳು ಅಥವಾ ವ್ಯಾಪಾರಿಗಳೆಂದು ಸಾರ್ವತ್ರಿಕವಾಗಿ ಗುರುತಿಸಿಕೊಂಡ ನಮ್ಮ ಸಮುದಾಯದ ಆರ್ಥಿಕ ಪರಿಸ್ಥಿತಿ ತೀರಾ ಶೋಚನೀಯವಾಗಿದೆ. ಬ್ಯಾರಿ ಸಮುದಾಯ ಸಾಂಪ್ರದಾಯಿಕವಾಗಿ ನೆಚ್ಚಿಕೊಂಡು ಬಂದ ಕಸಬುಗಳೆಂದರೆ, ಬೀಡಿ ಕಟ್ಟುವುದು, ಅದರ ಗುತ್ತಿಗೆ, ದಿನಸು ಅಂಗಡಿ, ಮೀನು ಮಾರಾಟ, ಕೃಷಿ ಉತ್ಪನ್ನಗಳನ್ನು ಖರೀದಿಸಿ ಮಾರುವುದು, ಮರದ ವ್ಯಾಪಾರ, ಹಣ್ಣು ಹಂಪಲುಗಳ ಮಾರಾಟ, ಗುಜರಿ ವ್ಯಾಪಾರ, ಜವುಳಿ ವ್ಯಾಪಾರ, ಇತ್ಯಾದಿ. ದೊಡ್ಡ ವ್ಯಾಪಾರವೆಂದರೆ ಮರದ ಮಿಲ್ಲುಗಳು. ಇಷ್ಟಕ್ಕೇ ಸಮುದಾಯದ ದುಡಿಮೆ ನಿಂತಿದೆ. ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಬ್ಯಾರಿ ಸಮುದಾಯ ತಲೆತೂರಿಸಲೇ ಇಲ್ಲ.

ರಾಜ್ಯದಲ್ಲಿ ನಡೆದ ಒಂದು ಸಮೀಕ್ಷೆಯ ಪ್ರಕಾರ 98, 194 ಮಂದಿ ಅಲ್ಪಸಂಖ್ಯಾತರು ಬೀಡಿ ಕಟ್ಟುವುದರಲ್ಲಿ ನಿರತರಾಗಿದ್ದಾರೆ. ಇದರಲ್ಲಿ ಶೇಕಡಾ 99% ರಷ್ಟು ಮಂದಿ ಮುಸ್ಲಿಮರು.

0.3% ರಷ್ಟು ಜನ ರಖಂ ವ್ಯಾಪಾರಿಗಳು

2.4% ರಷ್ಟು ಜನ ಚಿಲ್ಲರೆ ವ್ಯಾಪಾರಿಗಳು

0.3% ರಷ್ಟು ಜನ ಗೂಡಂಗಡಿ ಮತ್ತು ಬೀದಿಬದಿಯ ಮಾರಾಟಗಾರರು.

ಅಂದರೆ ಸುಮಾರು 95% ರಷ್ಟು ಮುಸ್ಲಿಮರು ಬೀಡಿ ಮತ್ತು ಇತರ ಸಣ್ಣ ಆದಾಯದ ಕೆಲಸಗಳಲ್ಲಿ ನಿರತರಾಗಿದ್ದಾರೆ ಎಂದರ್ಥ. ಸುಮಾರು ಶೇ. 38% ಮುಸ್ಲಿಮರ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಕೇವಲ ಶೇಕಡಾ 75% ರಷ್ಟು ಕುಟುಂಬಗಳಿಗೆ ಮಾತ್ರ ರೇಶನ್ ಕಾರ್ಡ್ ಇದೆ. ಶೇಕಡಾ 22 ರಷ್ಟು ಜನರಿಗೆ ಸ್ವಂತ ಮನೆಯಿಲ್ಲ. ಇದೆಲ್ಲಕ್ಕಿಂತಲೂ ರೋಚಕವಾದ ಒಂದು ಅಂಶ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರಿಗಿಂತ ಪಟ್ಟಣಗಳಲ್ಲಿ ವಾಸಿಸುವ ಬಡವರು ಹೆಚ್ಚು ಕಷ್ಟ ಕಾರ್ಪಣ್ಯಗಳಿಂದ ಕೂಡಿರುತ್ತಾರೆ. ಅವರ ಮನೆಗಳು ಕೊಳಚೆ ಪ್ರದೇಶಗಳು.

5. ಸಾಂಸ್ಕೃತಿಕ ಸಮಸ್ಯೆಗಳು : ಬ್ಯಾರಿ ಸಮುದಾಯದಲ್ಲಿ ''ಸಂಸ್ಕೃತಿ ಅಂದರೆ ಪರಂಪರಾಗತವಾಗಿ ಬಂದ ಪದ್ಧತಿಗಳ ಆಚಾರ-ವಿಚಾರಗಳ್ಳ, ನಡೆ-ನುಡಿಗಳ್ಳ, ಕಲೆಗಳ, ಆರಾಧನೆ-ನಂಬಿಕೆಗಳ ಸಮಷ್ಟಿ.' ಇಲ್ಲಿ ನಂಬಿಕೆ ಮತ್ತು ಆರಾಧನೆಗಳಿಗೆ ಪ್ರಾಮುಖ್ಯತೆ ಇದೆ. ಏಕರೂಪತೆ, ಉಳಿದವುಗಳಲ್ಲಿ ವೈವಿಧ್ಯತೆ ಇದೆ. ಉಳಿದವುಗಳಲ್ಲಿ ಸುಸಂಸ್ಕೃತಿ ಮತ್ತು ವಿಕೃತಿ ಎರಡನ್ನೂ ಸ್ಪಷ್ಟವಾಗಿ ಗುರುತಿಸಬಹುದು. ಬ್ಯಾರಿ ಸಮುದಾಯದಲ್ಲಿ ಮಹಿಳೆಯರಿಗೆ ಸಮಾನತೆಗಿಂತಲೂ ಗೌರವ ಹೆಚ್ಚು. ಇದರಿಂದಾಗಿ ಕುಟುಂಬದಲ್ಲಿ ಮಹಿಳೆಗೆ ಒಂದು ವಿಶಿಷ್ಟ ಸ್ಥಾನವಿದೆ. ಕುಟುಂಬದ ಯಜಮಾನ ತನ್ನ ಸರ್ವಸ್ವವನ್ನೂ ಮುಡಿಪಾಗಿಡುವುದು ಕುಟುಂಬದ ಕಲ್ಯಾಣಕ್ಕಾಗಿ. ಆದರೂ ಬ್ಯಾರಿ ಸಮುದಾಯ ಒಟ್ಟಾರೆಯಾಗಿ ನೈತಿಕ ಮತ್ತು ಸಾಂಸ್ಕೃತಿಕವಾಗಿ ಕೆಲವು ಸಮಸ್ಯೆಗಳನ್ನು ಎದುರಿಸುತ್ತದೆ.

a. ಶಿಕ್ಷಣ ಕೇಂದ್ರಗಳಿಗೆ (ಶಾಲೆ-ದರ್ಸ್) ಹೋಗುವ ಹೆಣ್ಣುಮಕ್ಕಳು ಒಂದು ರೀತಿಯ ಶೋಷಣೆಗೆ ಒಳಗಾಗುತ್ತಾರೆ. ವಸ್ತ್ರಧಾರಣೆ, ದೈಹಿಕ, ಮಾನಸಿಕ ಶೋಷಣೆ ಇತ್ಯಾದಿ.

b. ಬೀಡಿಯನ್ನು ಅವಲಂಬಿಸಿದ ಹೆಣ್ಣುಮಕ್ಕಳು ಬೀಡಿ ಬ್ರಾಂಚುಗಳಿಗೆ ತಾವು ಕಟ್ಟಿದ ಬೀಡಿಯನ್ನು ತಾವೇ ಒವಗಿಸಬೇಕಾದ ಪರಿಸ್ಥಿತಿ. ಇಲ್ಲಿ ಕೂಡ ಎರಡು ರೀತಿಯ ಸಮಸ್ಯೆಗಳಿವೆ. ಒಂದು : ನೈತಿಕತೆಗೆ ಸಂಬಂಧಿಸಿದ್ದು. ಎರಡು : ಅನಕ್ಷರಸ್ಥ ಹೆಣ್ಣು ಮಗಳು ಕೊಂಡುಹೋದ ಬೀಡಿಯ ಸಂಖ್ಯೆಯನ್ನು ಪಾಸ್ ಪುಸ್ತಕದಲ್ಲಿ ಸರಿಯಾಗಿ ನಮೂದಿಸದೆ, ಮಜೂರಿ, ಪ್ರಾವಿಡೆಂಟ್ ಫಂಡ್ ಮುಂತಾದ ಸೌಲಭ್ಯಗಳಿಂದ ವಂಚಿತರಾಗುವಂತೆ ಗುತ್ತಿಗೆದಾರರು ಶೋಷಿಸುವುದು.

c. ವಿವಾಹಿತ ಮಹಿಳೆಯರು ಆಸ್ಪತ್ರೆ, ಚಿಕಿತ್ಸಾಲಯ ಮುಂತಾದ ಆರೋಗ್ಯ ಕೇಂದ್ರಗಳಿಗೆ ಭೇಟಿಯಿತ್ತಾಗ ಅಲ್ಲಿನ ವೈದ್ಯರು ನಾನಾರೀತಿಯಲ್ಲಿ ಶೋಷಣೆ ಮಾಡುತ್ತಾರೆ. ಆರೋಗ್ಯ, ಔಷಧಿಯ ಕುರಿತು ಸರಿಯಾದ ಮಾಹಿತಿ ನೀಡುವುದಿಲ್ಲ.

ಬ್ಯಾರಿ ಮಹಿಳೆಯರಿಗೆ ಸಂಬಂಧಿಸಿದಂತೆ ಹಲವು ಸಾರ್ವಜನಿಕ ಕ್ಷೇತ್ರದಲ್ಲಿ ಸಂಭವಿಸಬಹುದಾದ ಶೋಷಣೆಗಳು ಬ್ಯಾರಿ ಸಮುದಾಯದ ನೈತಿಯಕತೆಯನ್ನೇ ಪ್ರಶ್ನಿಸುವಂತಿದೆ.

ಇನ್ನು ನಮ್ಮ ಸಮುದಾಯದಲ್ಲಿ ನಡೆಯುವ ಸಾಂಸ್ಕೃತಿಕ ಅಧಃಪತನದ ಎರಡು ಉದಾಹರಣೆಗಳು.

1. ತಲಾಖ್ ಅನುಮತಿಯನ್ನು ದುರುಪಯೋಗಪಡಿಸುವುದು.
2. ಬಹುಪತ್ನಿತ್ವದ ಸಾಧ್ಯತೆಯನ್ನು ದುರ್ಬಳಕೆ ಮಾಡಿಕೊಂಡಿರುವುದು.

ಕೇವಲ ವರದಕ್ಷಿಣೆಗಾಗಿ ತಲಾಖ್ ನೀಡಿ ಮರು ವಿವಾಹವಾದ ಮತ್ತು ಕೇವಲ ಹಣಕ್ಕಾಗಿ ಎರಡು ಮೂರು ಮದುವೆಯಾದ ಉದಾಹರಣೆಗಳು ನಮಗೆ ಸಿಗುತ್ತವೆ.

ಇನ್ನೊಂದು ಸಾಂಸ್ಕೃತಿಕ ಸಮಸ್ಯೆಯೇನೆಂದರೆ ಕೆಲವು ಧಾರ್ಮಿಕ ಸಮಾರಂಭಗಳಲ್ಲಿ ಮತ್ತು ಆಚರಣೆಗಳಲ್ಲಿ ಸಂಘಟನೆಗಳ ಯುವಕರು ಮೂಲ ಸಂಸ್ಕೃತಿಗೆ ಧಕ್ಕೆಯಾಗುವಂತೆ ವರ್ತಿಸುವುದು. ಕೆಲವಂತೂ ಅನಾಗರಿಕ ವರ್ತನೆಗಳು. ಒಂದೊಂದು ಜಮಾತಿನಲ್ಲಿರುವ ಹಲವಾರು ಸಂಘಟನೆಗಳು ಪರಸ್ಪರ ವಿರುದ್ಧ ಚಟುವಟಿಕೆಗಳಲ್ಲೂ ತೊಡಗಿವೆ ಎಂಬುದು ವಿಷಾದನೀಯ. ಬ್ಯಾರಿ ಸಮುದಾಯದ ಸಂಘಟನೆಗಳು ಸಂಘಟಿಸಬೇಕು. ಕ್ರಿಯಾಶೀಲವಾಗಿದ್ದು ಮಾದರಿಯಾಗಿರಬೇಕು.

ನಮ್ಮ ಸಮುದಾಯದ ಮತ್ತೊಂದು ಸಮಸ್ಯೆ ಏನೆಂದರೆ, ಪ್ರತಿಯೊಬ್ಬ ಬ್ಯಾರಿಗೆ ಇಡುವ ಹೆಸರು ಅರಬಿ ಭಾಷೆಯ ಮೂಲದಿಂದ ಬಂದದ್ದು, ಕೆಲವು ಧಾರ್ಮಿಕ ಕಾರಣಗಳಿಂದಾಗಿ ಇದು ಸರಿ ಇರಬಹುದು. ಆದರೆ ಅನೇಕರಿಗೆ ಅದರ ಉಚ್ಚಾರಣೆ ಸರಿಯಾಗಿ ತಿಳಿದಿಲ್ಲ. ದುರಂತವೇನೆಂದರೆ ಮದ್ರಸದಲ್ಲಿ ಕೂಡ ಆ ಹೆಸರನ್ನು ಬರೆಯುವ ರೀತಿ ಮತ್ತು ಉಚ್ಚಾರಣೆಯನ್ನು

ಹೇಳಿಕೊಡುವುದಿಲ್ಲ. ಕನಿಷ್ಠ ಪಕ್ಷ ತಮ್ಮ ಹೆಸರನ್ನಾದರೂ ಸರಿಯಾಗಿ ಉಚ್ಚರಿಸುವಂತೆ ನಮ್ಮನ್ನು ಬದಲಾಯಿಸಿಕೊಳ್ಳಬೇಕು.

6. ಇನ್ನಿತರ ಸಮಸ್ಯೆಗಳು : ಕೆಲವು ಮೂಲಭೂತ ಸಮಸ್ಯೆಗಳು ನಮ್ಮ ಸಮುದಾಯವನ್ನು ಆವರಿಸಿಕೊಂಡಿವೆ.

1. ಧಾರ್ಮಿಕ ಕೇಂದ್ರಗಳ ಕಟ್ಟಡ, ಬ್ಯಾರಿಗಳ ವಸತಿ, ನಿವೇಶನಗಳಲ್ಲಿ ಕೆಲವು ಪಟ್ಟಾರಹಿತವೂ, ದಾಖಲೆರಹಿತವೂ ಆಗಿವೆ ಎಂದು ಬ್ಯಾರಿ ವೆಲ್‌ಫೇರ್ ಅಸೋಸಿಯೇಶನ್, ಬೆಂಗಳೂರು ಇದರ ಪ್ರಾಯೋಜಕತ್ವದಲ್ಲಿ ನಡೆದ ಸಮೀಕ್ಷೆಯೊಂದು ತಿಳಿಸುತ್ತದೆ.
2. ನಾಯಕತ್ವದ ಕೊರತೆಯಿಂದಾಗಿ ರಾಜಕೀಯ ಚಟುವಟಿಕೆಗಳಲ್ಲಿ ಏಕರೂಪತೆ ಕಂಡುಬರುವುದಿಲ್ಲ.
3. ಆರೋಗ್ಯದ ಬಗೆಗಿನ ನಿಷ್ಕಾಳಜಿಯಿಂದಾಗಿ ಸಮುದಾಯ ದುರ್ಬಲವಾಗುತ್ತದೆ.
4. ಬೀಡಿ ಉದ್ಯಮಕ್ಕೆ ಪರ್ಯಾಯ ವ್ಯವಸ್ಥೆ ಸದ್ಯಕ್ಕೆ ಇಲ್ಲದಿರುವುದು.
5. ಕೋಮು ಸಾಮರಸ್ಯದ ಕುರಿತು ಮಾಹಿತಿ ಮತ್ತು ಜಾಗೃತಿ ಇಲ್ಲದಿರುವುದು.
6. ನೈರ್ಮಲ್ಯ, ಪರಿಸರದ ಕುರಿತ ಅಜ್ಞಾನ.

ಚರ್ಚಿಸಬಹುದಾದ ಕೆಲವು ಸಲಹೆಗಳು: ಬ್ಯಾರಿಯ ಉಗಮ ಎಲ್ಲಿಂದಲೇ ಆಗಿರಲಿ, ನಾವು ಬ್ಯಾರಿ ಎಂಬ ಅನನ್ಯತೆಯಿಂದ ಗುರುತಿಸಿಕೊಂಡಾಗಿದೆ. ಇನ್ನು ನಮ್ಮ ಪ್ರತಿಯೊಂದು ಚಟುವಟಿಕೆಗಳಲ್ಲೂ ಬೆಳಕಿನ ವೇಗ ಕಾಣಿಸಿಕೊಳ್ಳಬೇಕು ಮತ್ತು ಸಮುದಾಯಕ್ಕೆ ಬೆಳಕಾಗಬೇಕು. ಆ ನಿಟ್ಟಿನಲ್ಲಿ ಚರ್ಚೆಗೆ ಮುಕ್ತ ಅವಕಾಶ ಇರುವ ಕೆಲವು ಸಲಹೆಗಳು.

ಶಿಕ್ಷಣ :

1. ಪ್ರತಿಯೊಂದು ಜಮಾಅತಿನಲ್ಲಿ ಬ್ಯಾರಿಗಳಿಂದ ಬ್ಯಾರಿಗಳಿಗಾಗಿ ಆಧುನಿಕ ಶಿಕ್ಷಣ ಸಿಗುವಂತೆ ಪ್ರಾಥಮಿಕ - ಪ್ರೌಢ ಶಾಲೆಗಳನ್ನು ತೆರೆಯುವುದು.
2. ಮದ್ರಸಾ ಕಲಿಕೆಯ ವೇಳೆಯ ನಂತರ ಮುಚ್ಚಲ್ಪಡುವ ಮದ್ರಸಗಳು ತೆರೆಯಲ್ಪಟ್ಟು ಈವರೆಗಿರುವ ಐದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು. ಜೊತೆಗೆ ಪಾಠ ಪುಸ್ತಕಗಳು ಬ್ಯಾರಿ ಭಾಷೆಗೆ ತರ್ಜುಮೆಯಾಗಬೇಕು.
3. ಮಸೀದಿಯ ದರ್ಸ್‌ಗಳಲ್ಲಿ ಕಲಿಯುವ ಮುಅಲ್ಲಿಂಗಳಿಗೆ ಗಣಿತ, ಸಮಾಜಶಾಸ್ತ್ರ, ವಿಜ್ಞಾನ, ಭಾಷೆ ಮುಂತಾದವುಗಳನ್ನು ಕಲಿಸಲು ನಿರುದ್ಯೋಗಿ ಪದವೀಧರರನ್ನು ಸಂಬಳಕ್ಕೆ ನೇಮಿಸಿ ಅವರನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಲು ಅನುವು ಮಾಡಿಕೊಡುವುದು.
4. ವಯಸ್ಕರ ಶಿಕ್ಷಣ ಕೇಂದ್ರಗಳೂ ಬ್ಯಾರಿಗಳಿಂದ ಬ್ಯಾರಿಗಳಿಗಾಗಿ ತೆರೆಯಬೇಕು.

ಉದ್ಯೋಗ:

1. ನಿರುದ್ಯೋಗಿ ಬ್ಯಾರಿಗಳು ಸಿಕ್ಕಿದ ಸುಸಮ್ಮತ ಕೆಲಸವನ್ನು ಮಾಡುವಂತೆ ಮನವೊಲಿಸುವುದು. ಅನಿವಾಸಿ ಭಾರತೀಯ ಬ್ಯಾರಿಗಳಲ್ಲಿ ಕೂಡ ಕೆಲವು ನಿರುದ್ಯೋಗಿಗಳಿದ್ದಾರೆ. ಅವರ ಸ್ಥಿತಿ ಕೂಡ ಇಲ್ಲಿನ ನಿರುದ್ಯೋಗಿಗಳಿಗಿಂತ ಭಿನ್ನವಾಗಿಲ್ಲ.
2. ಪ್ರತಿಯೊಂದು ಜಮಾಅತಿನಲ್ಲಿ ತಂತಮ್ಮ ಜಮಾಅತಿಗರಿಗೆ ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ಕೇವಲ ದಾನ ಕೊಡುತ್ತಾ ಇದ್ದರೆ ಚಟುವಟಿಕೆ ಕಡಿಮೆಯಾಗುತ್ತದೆ.
3. ಸರ್ಕಾರಿ, ಅರೆಸರ್ಕಾರಿ, ಖಾಸಗಿ ವಲಯಗಳಲ್ಲಿ ಹುದ್ದೆಗಳಿಗೆ ಸೇರಲು ಅರ್ಹತೆಯುಳ್ಳವರನ್ನು ಅದಕ್ಕಾಗಿ ಪ್ರೇರೇಪಿಸಬೇಕು. ಮೀಸಲಾತಿಯ ಅರಿವು.
4. ಬೀಡಿ ಉದ್ಯಮಕ್ಕೆ ಪರ್ಯಾಯವಾಗಿ ಹುರಿ ಹಗ್ಗತಯಾರಿ, ಕೋಳಿ ಸಾಕಣಿಕೆ, ಕೋಳಿಮೊಟ್ಟೆ ಉತ್ಪಾದಿಸುವ ಘಟಕ, ಹೊಲಿಗೆ ಮುಂತಾದುವುಗಳನ್ನು ಆರಿಸುವಂತೆ ಮಾಡುವುದು.
5. ಬೀಡಿ ಉದ್ಯಮಕ್ಕೆ ಪರ್ಯಾಯವಾಗಿ ನೀಡುವ ಉದ್ಯಮಕ್ಕೆ ತರಬೇತಿ ಕೇಂದ್ರಗಳನ್ನು ಏರ್ಪಡಿಸಿ ತರಬೇತಿ ಮುಗಿದ ನಂತರ ಅದನ್ನು ಬ್ಯಾರಿ ಸಹಕಾರಿ ಸಂಘಗಳಾಗಿ ಪರಿವರ್ತಿಸಬೇಕು.

ವಿವಾಹ-ವರದಕ್ಷಿಣೆ :

1. ವರದಕ್ಷಿಣೆಯನ್ನು ತಕ್ಷಣ ನಿಲ್ಲಿಸಬೇಕಾದರೆ ಹೆಣ್ಣುಮಕ್ಕಳ ಮದುವೆಗಾಗಿ ಸಂಘಟನೆಗಳು ನೀಡುವ ಸಹಾಯವನ್ನು ತಕ್ಷಣ ನಿಲ್ಲಿಸಬೇಕು. ಸಹಾಯದ ಹೆಸರಿನಲ್ಲಿ ಒಂದು ಸಾಮಾಜಿಕ ಪಿಡುಗಿಗೆ ಪರೋಕ್ಷವಾಗಿ ಈ ಸಂಘಟನೆಗಳು ಕಾರಣವಾಗುತ್ತದೆ. ಹೆಣ್ಣು ಮಕ್ಕಳ ಮದುವೆಗೆ ಎಲ್ಲಿ ಕೂಡ ಸಹಾಯ ಸಿಗುವುದಿಲ್ಲವೆಂದಾದಾಗ ವರದಕ್ಷಿಣೆ ಕೇಳುವವರ ಸದ್ದಡಗುತ್ತದೆ.
2. ಆಡಂಬರದ ಮದುವೆಗೆ ಶರಣಾಗದೆ ಶಕ್ತ್ಯಾನುಸಾರ ಸರಳ ವಿವಾಹವೇರ್ಪಡಿಸುವುದು. ಆಹಾರದ ದುರುಪಯೋಗ, ದುಂದುವೆಚ್ಚಗಳು ಇದರಿಂದ ನಿಲ್ಲುವುದು.
3. ಸಾಮೂಹಿಕ ವಿವಾಹಗಳನ್ನೇರ್ಪಡಿಸಿ ಬ್ಯಾರಿ ಬಡ ಕುಟುಂಬಗಳ ಸಂತೋಷದಲ್ಲಿ ಭಾಗಿಯಾಗುವುದು.
4. ಸಾಧ್ಯವಾದಷ್ಟು ಹೆಚ್ಚು ಬ್ಯಾರಿ - ಬ್ಯಾರಿ ಕುಟುಂಬಗಳ ನಡುವೆ ವಿವಾಹವೇರ್ಪಡಿಸಿ ನಮ್ಮ ಸಂಸ್ಕೃತಿಯ ಮೌಲ್ಯವನ್ನು ಹೆಚ್ಚಿಸುವುದು.

ಇನ್ನಿತರ ಸಲಹೆಗಳು :

1. ಕೂಡಲೇ ಒಂದು ಬ್ಯಾರಿ ಮಾಹಿತಿ ಕೇಂದ್ರವನ್ನು ಮಂಗಳೂರಿನಲ್ಲಿ ಸ್ಥಾಪಿಸುವುದು ಮತ್ತು ಕ್ರಮೇಣ ಪ್ರತೀ ತಾಲೂಕಿನಲ್ಲಿ ಮಾಹಿತಿ ಕೇಂದ್ರ ಸ್ಥಾಪಿಸುವುದು.
2. ಬ್ಯಾರಿಗಳಿಗಾಗಿ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ಏರ್ಪಡಿಸುವುದು. ಆರೋಗ್ಯದ ಕುರಿತು ಬ್ಯಾರಿ ಕೇರಿಗಳಲ್ಲಿ ಮಾಹಿತಿ ನೀಡುವುದು.
3. ಸಾಹಿತ್ಯ ಸಮ್ಮೇಳನದಲ್ಲಿ ಉಳಿದ ಹಣದಿಂದ ಬಡ ಬ್ಯಾರಿ ಕುಟುಂಬಗಳಿಗೆ ಅರ್ಹತೆಯ ಮೇರೆಗೆ ವಸತಿ ನಿರ್ಮಿಸಿ ಕೊಡುವುದು.
4. ಧಾರ್ಮಿಕ ವಿದ್ವಾಂಸರುಗಳ ನಡುವೆ ಆರೋಗ್ಯಕರ ಸೆಮಿನಾರ್‌ಗಳನ್ನು ಏರ್ಪಡಿಸಿ ಗುಂಪುಗಾರಿಕೆಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು.
5. ಕೇರಳದಿಂದ ಮತ್ತು ಇತರ ರಾಜ್ಯಗಳಿಂದ ಬರುವ ಸಾಂಸ್ಕೃತಿಕ ಅತಿಕ್ರಮಣವನ್ನು ತಡೆಯಬೇಕು.

ಪ್ರಬಂಧದ ಎರಡನೆ ಘಟಕ ಬ್ಯಾರಿ ಸಾಹಿತ್ಯ :

ಬ್ಯಾರಿ ಸಾಹಿತ್ಯದ ಹಿನ್ನೆಲೆ : ಬ್ಯಾರಿ ಜನಾಂಗದಲ್ಲಿ ವಿಪುಲವಾದ ಸಾಹಿತ್ಯವಿದೆ. ಬಾಯ್ದೆರೆಯ ಜನಪದ ಹಾಡುಗಳು, ಒಗಟುಗಳು (ಎದ್‌ರ್ ಮಸಾಲೆ) ಕಥೆಗಳು (ಮಸಾಲೆ) ಕೈಕೊಟ್ಟು ಪಾಟ್, ಮ್ಯಾಲಾಂಜಿಪಾಟ್, ಒಪ್ಪನೆಪಾಟ್ ಮುಂತಾದ ಹಾಡುಗಳ ಸಮಾಹಾರವೇ ಇದೆ. ಆದರೆ ಬ್ಯಾರಿ ಭಾಷೆಗೆ ಲಿಪಿ ಇಲ್ಲ ಎಂಬ ಕಾರಣಕ್ಕಾಗಿಯೇ ಬರಹ ರೂಪದಲ್ಲಿ ಇವುಗಳನ್ನು ಕ್ರೋಢೀಕರಿಸಲಿಲ್ಲ.

ತೀರ ಇತ್ತೀಚೆಗೆ ಇಂತಹ ಕೆಲವು ಸಾಹಿತ್ಯಗಳನ್ನು ಕ್ರೋಢೀಕರಿಸುವ ಪ್ರಯತ್ನ ನಡೆಯುತ್ತಿದೆ. ಕನ್ನಡ ಲಿಪಿಯನ್ನು ಉಪಯೋಗಿಸಿ ನಮ್ಮ ಸಾಹಿತ್ಯವನ್ನು ಬರೆದಿಡುವುದು ಪ್ರೋತ್ಸಾಹನೀಯ. ಬ್ಯಾರಿ ಭಾಷೆಯಲ್ಲಿ ಸಾಹಿತ್ಯವನ್ನು ಬರೆಯದಿದ್ದರೂ ಬ್ಯಾರಿಗಳು ಎಪ್ಪತ್ತರ ದಶಕದಲ್ಲೇ ಇತರ ಭಾಷೆಗಳಲ್ಲಿ ಸಾಹಿತ್ಯ ಕೃಷಿಗೆ ತೊಡಗಿದ್ದರು. ಅಂದರೆ ಕನ್ನಡ ಸಾಹಿತ್ಯದಲ್ಲಿ ಬ್ಯಾರಿಗಳ ಪ್ರಾತಿನಿಧ್ಯವು ಮೊದಲೇ ಇದ್ದು ಕನ್ನಡ ಸಾಹಿತ್ಯದಲ್ಲಿ ಇದೊಂದು ವಿಶಿಷ್ಟ ಭಾಗವೆಂದು ಗುರುತಿಸಲ್ಪಟ್ಟಿದೆ.

ಭಾಷೆ ಒಂದು ಅವಲೋಕನ : ಶತಶತಮಾನಗಳಿಂದ ಮೂಕವಾಗಿದ್ದ ಒಂದು ಜನಾಂಗ ಮೊದಲ ಬಾರಿಗೆ ತನ್ನನ್ನು ಗುರುತಿಸಿಕೊಂಡಿದೆ. ತನ್ನ ಸ್ಥಿತಿಗತಿಯ ಬಗ್ಗೆ ತಾನೇ ಮಾತನಾಡಿಕೊಂಡಿದೆ.

ಜಗತ್ತಿನ ಸೃಷ್ಟಿಗಳಲ್ಲಿ ಭಾಷೆ ಒಂದು ಅದ್ಭುತ ಶಕ್ತಿ. ಅದಕ್ಕೊಂದು ಸಹಜ ಭಾಗವಿದೆ. ಅದನ್ನು ಎಲ್ಲರೂ ಉಪಯೋಗಿಸು ತ್ತಾರೆ. ಅದನ್ನು ಉಪಯೋಗಿಸಿಕೊಂಡು ಕವಿಗಳು, ಸಾಹಿತಿಗಳು ಮತ್ತೊಂದು ಕೃತಕ ಭಾಗವನ್ನು ಸಂಪಾದಿಸಿಕೊಡುತ್ತಾರೆ. ಈ ಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಅವರು ಭಾಷೆಯನ್ನು ಉಪಯೋಗಿಸಿ ಕಾವ್ಯ, ಶಾಸ್ತ್ರ ಪ್ರಬಂಧ ರೂಪಗಳಿಗೆ ತಿರುಗಿಸಿ ಮನೋಬುದ್ಧಿಗಳ ವಿಕಾಸಕ್ಕೂ ಮನುಷ್ಯನ ಸರ್ವತೋಮುಖ ಪ್ರಗತಿಗೂ ನಾಂದಿಯಾಗಿಸುತ್ತಾರೆ. ಭಾಷೆ ಒಂದು ಮಹಾ ಸತ್ಯ.

ಅದನ್ನು ಜವಾಬ್ದಾರಿಯುತವಾಗಿ ಉಪಯೋಗಿಸಿಕೊಂಡು ಜೀವನಕ್ಕೆ ಸೌಂದರ್ಯ ಕೊಡುವುದು ಮತ್ತು ಜನರನ್ನು ಚಿಂತನೆಗೀಡು ಮಾಡುವದು ಯಾವ ಭಾಷಿಕರೇ ಆಗಿರಲಿ ಅದವರ ಕರ್ತವ್ಯ.

ಬ್ಯಾರಿ ಭಾಷೆಯ ಬಳಕೆಯ ವ್ಯಾಪ್ತಿ : ನಾವು ಬ್ಯಾರಿ ಭಾಷೆಯನ್ನು ಮಾತಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಳಸುತ್ತಿದ್ದರೂ ಬರವಣಿಗೆಯಲ್ಲಿ ಅಷ್ಟು ಬಳಸುತ್ತಿಲ್ಲ. ಬ್ಯಾರಿ ಭಾಷೆಯನ್ನು ಮಾತಿನ ಭಾಷೆಯನ್ನಾಗಿ ಉಳಿಸಿಕೊಳ್ಳುವುದು ಭಾಷಾ ಸಂಗೋಪನೆಯ ಒಂದು ತಂತ್ರ ಹೌದು. ಧ್ವನಿ ಮುದ್ರಣ, ಕಥಾ ಪ್ರಸಂಗ, ಪ್ರಹಸನಗಳ ಮೂಲಕ ನಾವು ಬ್ಯಾರಿ ಭಾಷೆಯನ್ನು ಕೇವಲ ಮಾತಿನ ಭಾಷೆಯನ್ನಾಗಿ 'ಬಳಸು'ತ್ತಿದ್ದೇವೆ. ಈ ತಂತ್ರ ನಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಎಷ್ಟು ಕಾಲ ನೆರವಾಗುತ್ತದೆ ಎಂದು ಹೇಳಲು ಬರುವುದಿಲ್ಲ. ಆದುದರಿಂದ ದಿನ ದಿನವೂ ಸಾವಿರಾರು ಪುಟಗಳಷ್ಟು ಬರವಣಿಗೆ ಸೃಷ್ಟಿಯಾಗಿ ಮುದ್ರಣಗೊಂಡು ಓದುಗರನ್ನು ತಲುಪುವಂತಾಗಬೇಕು. ಓದುಗರು ಅಂದರೆ ಒಂದು ಸೀಮಿತ ವಲಯ ಆಗುವ ಅಪಾಯವಿದೆ. ಬ್ಯಾರಿಗಳೆಲ್ಲರೂ ಓದುಗರಾಗುವ ಸಾಧ್ಯತೆ ಇಲ್ಲ. ಯಾಕೆಂದರೆ, ಬ್ಯಾರಿ ಭಾಷಿಕರು ವಾಸಿಸುತ್ತಿರುವ ಭೌಗೋಳಿಕ ಪ್ರದೇಶ ನಾವು ಭಾವಿಸುವಂತೆ ಕೇವಲ ಬ್ಯಾರಿ ಭಾಷಿಕರು ಮಾತ್ರ ವಾಸಿಸುವ ಪ್ರದೇಶವಾಗಿಲ್ಲ ಮತ್ತು ಅಂತರಾಷ್ಟ್ರೀಯ ಭಾಷೆ ಎನಿಸಿಕೊಂಡ ಇಂಗ್ಲೀಷ್, ರಾಷ್ಟ್ರೀಯ ಭಾಷೆ ಎನಿಸಿಕೊಂಡ ಹಿಂದಿ, ರಾಜ್ಯಾಂಗದಲ್ಲಿ ಒಂದು ಅಧಿಕೃತ ಭಾಷೆಯೆಂದು ಮನ್ನಣೆ ಪಡೆದ ಕನ್ನಡ ಇವೆಲ್ಲದಕ್ಕೆ ಅಧೀನರಾಗಿರಬೇಕಾದಂತಹ ಪ್ರಸಂಗ ಬ್ಯಾರಿ ಭಾಷಿಕರಿಗೆ ಉಂಟಾಗಿದೆ. ಅಂದರೆ ದ್ವಿಭಾಷಿಕರಾಗಿ ಅಥವಾ ಬಹು ಭಾಷಿಕರಾಗಿ ಬ್ಯಾರಿಗಳು ರೂಪುಗೊಳ್ಳುತ್ತಿದ್ದಾರೆ. ಇದರಿಂದಾಗಿ ಬ್ಯಾರಿ ಭಾಷೆಯ ಬಳಕೆಯ ವ್ಯಾಪ್ತಿ ದಿನೇದಿನೇ ಕುಗ್ಗುತ್ತಾ ಹೋಗುತ್ತದೆ. ಈ ಸಂದರ್ಭಗಳಲ್ಲಿ ಬ್ಯಾರಿ ಭಾಷೆಯ ಸ್ವಂತಿಕೆಯನ್ನು ಕಾಯ್ದುಕೊಳ್ಳಲು ದಿಟ್ಟತನದ ತಂತ್ರವನ್ನು ರೂಪಿಸಿಕೊಳ್ಳುವುದು ಅನಿವಾರ್ಯ. (ಉದಾ: ನುಡಿಬೆರಕೆ). ಇಂತಹ ಎಚ್ಚರದ ತಂತ್ರೋಪಾಯಗಳನ್ನು ರೂಪಿಸಿಕೊಂಡು ಒಂದು ಭಾಷೆ ಬೆಳೆಯುವುದುಂಟೇ ಎಂಬ ಸಂಶಯ ಬರುವುದು ಸಹಜ. ಜಗತ್ತಿನ ಹಲವಾರು ಭಾಷೆಗಳ ಸಂದರ್ಭಗಳನ್ನು ಗಮನಿಸಿದಾಗ ಇಂತಹ ಭಾಷಾ ಯೋಜನೆಯೊಂದನ್ನು ನಾವು ಒಪ್ಪಿಕೊಳ್ಳಬೇಕು. ಅದರ ಸಾಧ್ಯತೆಗಳನ್ನು ಗುರುತಿಸಲೇಬೇಕು. ಇಲ್ಲದಿದ್ದರೆ ಪತಾಕೆಯಿಂದ ನಿತ್ಯವೂ ಗೋಣಗುತ್ತಿರಬೇಕಾಗುತ್ತದೆ.

ಬ್ಯಾರಿ ಭಾಷೆ ಆಧುನಿಕ ಜಗತ್ತಿನ ಸವಾಲುಗಳಿಗೆ ಪ್ರತಿಸ್ಪಂದಿಸಲು ಮುಖ್ಯವಾಗಿ ಆಡಳಿತ, ಶಿಕ್ಷಣ ಹಾಗೂ ಸಮೂಹ ಮಾಧ್ಯಮಗಳ ವಲಯಗಳಲ್ಲಿ ಬಳಕೆಯಾಗಬೇಕು. ಈ ಮೂರು ವಲಯಗಳಲ್ಲಿ ಹಲವು ಉಪವಲಯಗಳಿದ್ದು ಅವೆಲ್ಲದರಲ್ಲೂ ಬ್ಯಾರಿ ಭಾಷೆ ಬಳಕೆಯಾಗುವುದು ಅವಶ್ಯ. ಇವುಗಳಲ್ಲದೆ ಬ್ಯಾರಿ ಭಾಷೆಯ ಬಳಕೆಗೆ ಇನ್ನಿತರ ವಲಯಗಳೂ ಇವೆ. ಉದಾಹರಣೆಗೆ ಕೌಟುಂಬಿಕ ಬಳಕೆ, ಖಾಸಗಿ ಪತ್ರ ವ್ಯವಹಾರ, ಸೃಜನಶೀಲ ಸಾಹಿತ್ಯ ಇತ್ಯಾದಿ.

ಒಟ್ಟಿನಲ್ಲಿ ಮಾತು ಬಲ್ಲವರನ್ನು ಬರೆಯ ಬಲ್ಲವರನ್ನಾಗಿ ಪರಿವರ್ತಿಸುವ ಮೂಲಕ ನಮ್ಮ ಸಂಸ್ಕೃತಿಯ ವಿಕಾಸ ಸಾಧ್ಯ ಎಂಬ ನಿಲುವಿಗೆ ಬರಬಹುದು.

ಬ್ಯಾರಿಭಾಷೆಯ ಬೆಳವಣಿಗೆ : ಭಾಷೆಯ ಬೆಳವಣಿಗೆ ಅಂದರೆ ನಮ್ಮ ಅಭಿರುಚಿಯ ವಿಸ್ತಾರ. ಬ್ಯಾರಿಗಳು ತಮ್ಮ ಜೀವನಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಕ್ಷೇತ್ರಗಳಲ್ಲಿ ತಮ್ಮ ಅಭಿರುಚಿಗಳನ್ನು ವಿಸ್ತರಿಸಿಕೊಳ್ಳುತ್ತಾರೋ ಭಾಷೆ ಕೂಡ ಆ ಕ್ಷೇತ್ರಗಳಲ್ಲಿ ವಿಸ್ತಾರಗೊಳ್ಳುತ್ತಿದೆ. ಅಂದರೆ ಬ್ಯಾರಿಗಳ ಜೀವನವೂ, ಬ್ಯಾರಿ ಭಾಷೆಯೂ, ಬ್ಯಾರಿ ಸಾಹಿತ್ಯವೂ ಬೇರೆ ಬೇರೆಯಲ್ಲ. ಅವೆಲ್ಲವೂ ಒಂದಕ್ಕೊಂದು ಹೊಂದಿಕೊಂಡೇ ಇರುತ್ತದೆ. ನಮ್ಮ ಭಾಷೆ ಒಂದು ಸಂಕೋಚವಾದ ಕ್ಷೇತ್ರದಲ್ಲಿ ಕಟ್ಟು ಕಟ್ಟಿಕೊಂಡು ಕುಳಿತುಕೊಂಡರೆ ಅದು ಬ್ಯಾರಿಗಳ ಜೀವನವನ್ನು ಮುಟ್ಟಲಾರದು. ನಮ್ಮ ಭಾಷೆಗೆ ಜೀವ ಕಳೆ ಬರಬೇಕಾದರೆ ಆ ಭಾಷೆಯ ಸಾಹಿತ್ಯ ಜನರ ಹೃದಯವನ್ನು ತಲುಪಿ ಜೀವನದಲ್ಲೆಲ್ಲಾ ವ್ಯಾಪಿಸಬೇಕು. ಬದುಕಿನ ಪ್ರತಿಯೊಂದು ಮೂಲೆಯನ್ನೂ ಬೆಳಗಿಸಬಲ್ಲಂತಹ ಭಾಷೆಯೇ ಸಜೀವ ಭಾಷೆ. ಬದುಕತಕ್ಕ ಭಾಷೆ ಕೂಡ ಅದುವೇ.

ಈ ಭಾಷೆಯ ಬೆಳವಣಿಗೆಗೆ ವಿದ್ಯಾರ್ಥಿಗಳು, ಅಧಿಕಾರಸ್ಥರೂ, ಶ್ರೀಮಂತರೂ, ಧಾರ್ಮಿಕ ಪಂಡಿತರೂ ಪ್ರಭಾವಶಾಲಿಗಳೂ ತಂತಮ್ಮ ವಲಯಗಳಲ್ಲಿ ಪ್ರಯತ್ನಿಸಬೇಕಾಗಿದೆ ಮತ್ತು ಒಂದು ತತ್ತ್ವವನ್ನು ಮನಸ್ಸಿನಲ್ಲಿ ಸ್ಫುಟವಾಗಿ ಧರಿಸಬೇಕಾಗಿದೆ. ಬ್ಯಾರಿಗಳ ಈ ಉತ್ಸಾಹ ಕೇವಲ ಭಾವಾತಿರೇಕದ ಉದ್ಗಾರವಲ್ಲ; ಇದು ವಿಚಾರಪೂರ್ಣವಾದ ಒಂದು ಸಿದ್ಧಾಂತ. ಬ್ಯಾರಿ ಭಾಷೆ ಈಗ ಸರಿಸುಮಾರು ಐದು ಲಕ್ಷದಷ್ಟು ಜನ ಮಾತನಾಡುವ ಜೀವಂತ ಭಾಷೆ. ಬ್ಯಾರಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಈ ಭಾಷೆ ನಿರ್ಣಾಯಕ ಪಾತ್ರ ವಹಿಸುತ್ತದೆ. ಬ್ಯಾರಿಗಳ ಉದ್ಧಾರಕ್ಕೆ ಭಾಷೆಯ ಹೊರತು ಬೇರೆ ಸಾಧಕ ಯಾವುದೂ ಇಲ್ಲ ಅನಿಸುತ್ತದೆ. ಬ್ಯಾರಿ ಭಾಷೆಯ ಶ್ರೇಯಸ್ಸು ಅಂದರೆ ಬ್ಯಾರಿ ಸಮುದಾಯದ ಶ್ರೇಯಸ್ಸು; ಬ್ಯಾರಿ ಸಮುದಾಯದ ಶ್ರೇಯಸ್ಸಿಗಾಗಿ ಬ್ಯಾರಿ ಭಾಷೆಯ ಶ್ರೇಯಸ್ಸು ಎಂಬ ತತ್ತ್ವವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳೋಣ.

ಇನ್ನು ಮುಖ್ಯವಾಗಿ ಭಾಷೆಯ ಬೆಳವಣಿಗೆ ತುರ್ತಾಗಿ ಆಗಬೇಕಾದ ಕಾರ್ಯಗಳು :

1. ಗ್ರಂಥೋತ್ಪತ್ತಿ:

a. ಬ್ಯಾರಿ ಭಾಷೆಯ ಕುರಿತು ಐತಿಹಾಸಿಕ ದಾಖಲೆಗಳನ್ನೊದಗಿಸುವ ಗ್ರಂಥಗಳ ರಚನೆ. (ಪ್ರೊ. ಬಿ. ಎಂ. ಇಚ್ಲಂಗೋಡ್ ಬರೆದ ''ತುಳುನಾಡ ಮುಸ್ಲಿಮರ ಬ್ಯಾರಿ ಸಂಸ್ಕೃತಿ') ಅಹ್ಮದ್ ನೂರಿಯವರ 'ಮೈಕಾಲ' ಎಂಬ ಪುಸ್ತಕ ಈ ಕುರಿತ ವಿರಳ ಗ್ರಂಥಗಳಲ್ಲಿ ಎರಡು)

b. ಬ್ಯಾರಿ ಭಾಷೆಯ ಜನಪದ ಕಥೆಗಳು ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ಗ್ರಂಥಗಳ ರಚನೆ (ಡಾ: ಶ್ರೀಮತಿ ಸುಶೀಲಾ ಉಪಧ್ಯಾಯರು ಬರೆದ ಬ್ಯಾರಿ ಭಾಷೆಯ ಜನಪದ ಕಥೆ ಎಂಬ ಪುಸ್ತಕ ಮಾತ್ರ ಆ ವಿಷಯದಲ್ಲಿ ಲಭ್ಯವಿದೆ).

c. ಬ್ಯಾರಿ ಕಥಾ ಸಂಕಲನ ಕವನ ಸಂಕಲನಗಳ ಬಿಡುಗಡೆ. (ಇದು ಉತ್ಸಾಹದಿಂದ ನಡೆಯುತ್ತಿರುವಂತೆ ಕಾಣುತ್ತದೆ)

d. ಧಾರ್ಮಿಕ ಪುಸ್ತಕಗಳ ರಚನೆ : (ಇದು ಬ್ಯಾರಿ ಭಾಷೆಯಲ್ಲಿ ಹೇರಳವಾಗಿ ಸೃಷ್ಟಿಯಾಗಬೇಕು. ಯಾಕೆಂದರೆ ಬ್ಯಾರಿ ಸಂಸ್ಕೃತಿಯ ಲೋಪದೋಷಗಳನ್ನು ತೊಳೆದು ಶುದ್ಧಿ ಮಾಡಲು ಇಸ್ಲಾಮೀ ಸಂಸ್ಕೃತಿಯ ಗ್ರಂಥಗಳ ಅಗತ್ಯವಿದೆ. ಒಂದರ್ಥದಲ್ಲಿ ಬ್ಯಾರಿ ಸಂಸ್ಕೃತಿಯ ಪರಿಷ್ಕೃತ ರೂಪವೇ ಇಸ್ಲಾಮೀ ಸಂಸ್ಕೃತಿ.

e. ಪದಕೋಶಗಳ ರಚನೆ : ಬ್ಯಾರಿ ಭಾಷೆಗೆ ಅರಬಿ ಭಾಷೆ. ತುಳು ಮಲಯಾಳಂ, ಕನ್ನಡ, ತಮಿಳು, ಇಂಗ್ಲೀಷ್ ಮುಂತಾದ ಭಾಷೆಗಳಿಂದ ಹೇರಳವಾಗಿ ಪದಗಳು ಹರಿದು ಬಂದಿದೆ. ಇದನ್ನು ಗುರುತಿಸಿ ದೇಶ್ಯ, ಅನ್ಯದೇಶ್ಯಗಳೆಂಬ ಗುಂಪುಗಳನ್ನಾಗಿ ಮಾಡಿ ಪದಕೋಶವನ್ನು ಆಧುನಿಕತೆಗೆ ಹೊಂದಿಸಿಕೊಂಡು ರಚಿಸಬೇಕು. (ಡಾ: ವಹಾಬ್ ದೊಡ್ಡಮನೆಯವರ ಬ್ಯಾರಿ ಅರ್ಥಕೋಶ ಅವರ ಚೊಚ್ಚಲ ಪ್ರಯತ್ನ ಶ್ಲಾಘನೀಯವಾದುದು.

f. ಭಾಷಾಂತರೀಕರಣ : ಇದು ಮತ್ತೊಂದು ಭಾಷೆಯನ್ನೂ ಅದರ ಸಂಸ್ಕೃತಿಯನ್ನೂ ನಮ್ಮ ಸಂಸ್ಕೃತಿಗೆ ಪರಿಚಯಿಸಲೂ ನಮ್ಮ ಸಂಸ್ಕೃತಿಯನ್ನು ಇತರ ಭಾಷೆಗೂ, ಸಮುದಾಯಕ್ಕೂ ಪರಿಚಯಿಸಲು ಸಹಕಾರಿಯಾಗುತ್ತದೆ.

g. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕಾನೂನುಗಳಿಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ರಚಿಸುವುದು.

h. ಮಕ್ಕಳ ಸಾಹಿತ್ಯ : ಧಾರ್ಮಿಕ ವಲಯದವರು ಪ್ರತ್ಯೇಕವಾಗಿ ಇದನ್ನು ಗಮನಿಸಬೇಕು. ಕೇರಳದಿಂದ ಬರುವ ಇಸ್ಲಾಮೀ ಬಾಲಪಾಠಪುಸ್ತಕಗಳನ್ನು ಮಾತ್ರ ಅವಲಂಬಿಸಿ ಇಂದಿನ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನು ನೀಡಲಾಗುತ್ತದೆ. ಬಾಲಪಾಠಗಳನ್ನೂ, ಮಕ್ಕಳ ಸಾಹಿತ್ಯವನ್ನೂ ಬ್ಯಾರಿ ಭಾಷೆಯಲ್ಲಿ ಬರೆದು ಮದ್ರಸಾದ ಮಕ್ಕಳಿಗೆ ಕಲಿಸಿದರೆ ಒಂದು ಅದ್ಭುತವಾದ ಪರಿವರ್ತನೆ ಕಾಣಲು ಸಾಧ್ಯ.

i. ವಿಮರ್ಶಾ ಗ್ರಂಥಗಳು : ಬ್ಯಾರಿ ಭಾಷೆಯ ಸಾಹಿತ್ಯಗಳು ಉತ್ತಮ ಚೌಕಟ್ಟಿನೊಳಗೆ ರಚನೆಯಾಗಬೇಕಾದರೆ ಸಾಹಿತ್ಯ ಗ್ರಂಥದೊಂದಿಗೆ ವಿಮರ್ಶೆಯೂ ಅತ್ಯಗತ್ಯ. ಹೀಗೆ ಒಂದು ಸಾಹಿತ್ಯವನ್ನು ವಿಮರ್ಶಿಸುವ ಇನ್ನೊಂದು ಗ್ರಂಥವೂ ಜ್ಞಾನದಾಹಿಗಳ ಇನ್ನೊಂದು ಸಾಹಿತ್ಯವಾಗಿ ಪರಿಗಣಿತವಾಗುತ್ತದೆ.

2. ಬ್ಯಾರಿಗಳ ಸಾಮಾಜಿಕ, ಧಾರ್ಮಿಕ ಸಂಘಟನೆಗಳೆಂದು ಅಂಗೀಕರಿಸಿದವುಗಳೆಲ್ಲಾ ತಮ್ಮ ತಮ್ಮ ಸಭೆ ಸಂಸ್ಥೆಗಳ ನಡವಳಿಕೆಗಳಲ್ಲಿ ಬ್ಯಾರಿ ಭಾಷೆಗಳಲ್ಲೇ ವ್ಯವಹರಿಸತಕ್ಕದ್ದು. ಇದು ಬ್ಯಾರಿಗಳ ಸಾರ್ವಜನಿಕ ಜೀವನ ಸುಗಮವಾಗುವುದಕ್ಕೆ ನಮ್ಮ ಭಾಷೆ ಸಹಸ್ರಮುಖವಾಗಿ ಬೆಳೆದು ಬಗೆಬಗೆಯ ಕೆಲಸಗಳಿಗೆ ಒದಗಿ ಬರುವುದಕ್ಕೂ ಸಹ ಇದು ಅವಶ್ಯ.

3. ಸಮೂಹ ಮಾಧ್ಯಮಗಳನ್ನು ಉಪಯೋಗಿಸುವುದು: ಆಕಾಶವಾಣಿ, ದೂರದರ್ಶನ, ವೃತ್ತಪತ್ರಿಕೆ, ನಿಯತಕಾಲಿಕಗಳು, ದಿನಪತ್ರಿಕೆಗಳಲ್ಲಿ ಬ್ಯಾರಿ ಭಾಷೆಗೆ ಪ್ರಾತಿನಿಧ್ಯ.

4. ಬ್ಯಾರಿ ವಿದ್ಯಾರ್ಥಿಗಳಿಗೆ ಮದ್ರಸದಲ್ಲಿನ ಮತ್ತು ಶಾಲೆಯ ವಿದ್ಯೆಗಳನ್ನು ಖಾಸಗಿಯಾಗಿ ಟ್ಯೂಷನ್ ಕೊಡುವಾಗ ಬ್ಯಾರಿ ಭಾಷೆಯ ಮೂಲಕ ಹೇಳಿಕೊಡಬೇಕು. ಮದ್ರಸ ಅಧ್ಯಾಪಕರು ಮತ್ತು ಟ್ಯೂಷನ್ ಕೊಡುವವರು (ಹೆತ್ತವರಾಗಲಿ, ಇತರರಾಗಲಿ) ಇದರೊಂದಿಗೆ ಸಹಕರಿಸಬೇಕು. ಪ್ರತಿ ತಾಲೂಕುಗಳಲ್ಲಿ ಇಂತಹ ಅಧ್ಯಾಪಕರನ್ನು ನಿರ್ಮಿಸುವ ಕೇಂದ್ರವನ್ನು ಸ್ಥಾಪಿಸುವುದು.

5. ಬ್ಯಾರಿಗಳಿಗಾಗಿ ಒಂದು ಪ್ರೌಢ ವಿದ್ಯಾಕೇಂದ್ರ ಸ್ಥಾಪನೆಯಾಗಬೇಕು.

ಸಾಹಿತ್ಯ ವ್ಯಾಖ್ಯೆ : "ಮಾತು ಮತ್ತು ಮಾತನಾಡುವವನ ನಡುವೆ ಒಂದು ವಿಶಿಷ್ಟವಾದ ವಾಙ್ಮಯ ವಿನ್ಯಾಸವೇರ್ಪಟ್ಟು ಅದು ವಾಸ್ತವಿಕ ಅಥವಾ ಕಾಲ್ಪನಿಕ ನೆಲೆಯಲ್ಲಿ ಲಿಖಿತ ರೂಪಕ್ಕೆ ಬರುವುದೇ ಸಾಹಿತ್ಯ".

ವ್ಯಾಖ್ಯಾನ : ಒಂದು ಮಗು ಮಾತನಾಡಲು ಕಲಿಯುವಾಗಲೇ ಆ ಮಗುವಿನಲ್ಲಿ ಸಾಹಿತ್ಯ ಪ್ರಕಟವಾಗುತ್ತದೆ. ಅಂದರೆ ಮಾತು ಎಂದು ಆರಂಭವಾಯ್ತೋ ಅಂದೇ ಸಾಹಿತ್ಯ ಆರಂಭವಾಗುತ್ತದೆ. ಇದು ಕೂಡ ಸ್ವಲ್ಪ ತಡವಾಯಿತೇನೋ? ಒಂದು ಮಗುವಿನ ಕೈಗೆ ಒಂದು ವಸ್ತುವನ್ನು ಕೊಟ್ಟರೆ ಆ ಮಗು ಅದನ್ನು ಕಚ್ಚುತ್ತದೆ, ಕುಟ್ಟುತ್ತದೆ, ಒಡೆಯುತ್ತದೆ. ಅದರ ಕೈಯಿಂದ ಕಸಿದುಕೊಂಡರೆ ಅದನ್ನು ಪುನಃ ಚಚ್ಚಬೇಕೆನ್ನುವ ಅವಕಾಶಕ್ಕಾಗಿ ಅಳುತ್ತದೆ. ಆ ಮಗುವಿಗೆ ಹಾಗೆಲ್ಲ ಮಾಡಬೇಕೆಂಬ ಅಂತಃಪ್ರೇರಣೆ ಹೇಗೆ ದೊರಕಿತು? ಅದೊಂದು ರಹಸ್ಯ. ಅಂದರೆ ಮಗು ಮಾತನಾಡುವುದಕ್ಕಿಂತ ಮೊದಲೇ ಪ್ರಕೃತಿಯೊಂದಿಗೆ ಸ್ಪಂದಿಸುತ್ತದೆ. ಹೊರಲೋಕಕ್ಕೂ ಒಳಬುದ್ಧಿಗೂ ನಡುವೆ ನಡೆಯುವ ಸೆಣಸಾಟದಲ್ಲಿ ಗೆದ್ದುಬರುವುದೇ ಸಾಹಿತ್ಯ.

ಸಾಹಿತ್ಯ ಎಂದರೆ 'ಒಟ್ಟಾಗಿರುವಿಕೆ' ಎಂಬ ಅರ್ಥವನ್ನೂ ನಮ್ಮ ಭಾಷಾ ಪಂಡಿತರು ಕೊಟ್ಟಿದ್ದಾರೆ. ಅಂದರೆ ನಾನಾ ವಿಷಯಗಳನ್ನು ಒಳಗೊಂಡಿರುವಂತಹ ಒಂದು ಕೂಟ. ಅದರಲ್ಲಿ ವಿಜ್ಞಾನ, ತತ್ವಜ್ಞಾನ, ಧರ್ಮನೀತಿ, ಸಂಗೀತ, ಕೃಷಿ, ವ್ಯಾಪಾರ, ಕಾನೂನು, ಇತಿಹಾಸ ಎಲ್ಲವೂ ಅಷ್ಟಿಷ್ಟು ಬಳಸಿಕೊಳ್ಳಲು ಸಾಧ್ಯವಿದೆ. ಈ ವಿಷಯಗಳನ್ನೆಲ್ಲ ಬೋಧಪ್ರದವೂ, ಜನಪ್ರಿಯವೂ, ಪ್ರಯೋಜನಕಾರಿಯೂ ಆಗಿ ರಚಿಸಲು ರೋಚಕತ್ವಕ್ಕೆ ಮತ್ತು ಮನೋರಂಜನೆಗೆ ಇಂಬು ಕೊಡಬೇಕಾಗುತ್ತದೆ. ರೋಚಕತ್ವಕ್ಕೆ ಕಲ್ಪನೆಯ ನೆರವು ಬೇಕು. ಆಗ ಒಂದು ಸಾಹಿತ್ಯ ವಾಸ್ತವಿಕ ಮತ್ತು ಕಾಲ್ಪನಿಕ ನೆಲೆಯಲ್ಲಿ ಬೆಳಕಿಗೆ ಬರುತ್ತದೆ. ಹೀಗೆ ನಾನಾ ಕಲ್ಪನೆಗಳಿಂದ ಕೂಡಿ ರೋಚಕವಾಗಿಯೂ ನಾನಾ ವಿಷಯಗಳ ಪ್ರತಿಪಾದನೆಯಿಂದ ಬೋಧಪ್ರದವಾಗಿಯೂ ಇರುವ ಗ್ರಂಥಗಳನ್ನು ಸಾಹಿತ್ಯ ಎಂದು ಕರೆಯಬಹುದು.

ಸಾಹಿತ್ಯ ಸರಸವಾಗಿರಬೇಕು. ರಸವನ್ನು ಒದಗಿಸುವ ಸಾಹಿತ್ಯ ಇನ್ನೂ ಬೇಕು, ಇನ್ನೂ ಬೇಕು ಎಂದೆನಿಸುವಂತಹ ರುಚಿಯುಳ್ಳ ದ್ರವ್ಯ.

ಜೀವನದ ಚಿತ್ರಕ್ಕೆ, ಬದುಕಿನ ಆಗುಹೋಗುಗಳಿಗೆ, ಮನಸ್ಸಿನ ನೂರಾರು ಕಲ್ಪನೆ, ಕನಸುಗಳಿಗೆ ಕಲೆಯ ಆಕಾರವನ್ನು ಭಾಷೆಯಲ್ಲಿ ಸಜ್ಜುಗೊಳಿಸಿಟ್ಟಾಗ ಅದು ಸಾಹಿತ್ಯವಾಗುತ್ತದೆ.

## ಸಾಹಿತ್ಯದಿಂದ ಪರಿಹಾರ ಸಾಧ್ಯವೇ?

ಮನುಷ್ಯನ ಉಗಮದ ನಂತರದ ನಾಗರಿಕತೆಯಲ್ಲಿ ಸುಸಂಸ್ಕೃತಿಯ ಮೂರು ತರಂಗಗಳನ್ನು ಕಾಣಬಹುದು. ಅಲೆಯುತ್ತಾ ಹೊಟ್ಟೆ ತುಂಬಿಸುತ್ತಿದ್ದ ಮನುಷ್ಯ ಸಮೂಹ ಕೃಷಿಯ ಮೊರೆಹೋದದ್ದು ಒಂದನೇ ತರಂಗ. ಬರಬರುತ್ತಾ ಯಂತ್ರಗಳ ಮೊರೆ ಹೋಗಿ ಮನುಷ್ಯನೆಬ್ಬಿಸಿದ ಕೈಗಾರಿಕಾ ಕ್ರಾಂತಿ ಎರಡನೇ ತರಂಗ. ಇಲ್ಲಿಂದ ಈಗ ನಾವು ಅನುಭವಿಸುತ್ತಿರುವ ಕಂಪ್ಯೂಟರ್, ಟೆಲಿಕಮ್ಯುನಿಕೇಶನ್ ಮೊದಲಾದ ಎಲೆಕ್ಟ್ರಾನಿಕ್ ಯುಗ ಮತ್ತು ಅದು ನಿರ್ಮಿಸಿದ ಸಮೂಹ ಮತ್ತು ರಾಷ್ಟ್ರದ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆ. ಇದು ಮೂರನೇ ತರಂಗ. ಆದರೆ ಈ ಮೂರನ್ನು ಒಟ್ಟು ಸೇರಿಸಿದ ಒಂದು ಅದ್ಭುತ ಶಕ್ತಿಯಿದೆ. ಅದುವೇ ಸಾಹಿತ್ಯ. ಅಂದರೆ ಮನುಷ್ಯ ಸಮೂಹ ಒಂದೊಂದೇ ತರಂಗಗಳಿಗೆ ಸಿಲುಕಿ ಬದಲಾವಣೆಯನ್ನು ಹೊಂದುತ್ತಿರುವಾಗಲೆಲ್ಲಾ ಸಾಹಿತ್ಯದ ಅನಿವಾರ್ಯತೆಯನ್ನು ಅಲ್ಲಗಳೆದಿರಲಿಲ್ಲ.

ಈ ನಿಟ್ಟಿನಲ್ಲಿ ಅವಲೋಕಿಸಿದಾಗ ಸಾಹಿತ್ಯವನ್ನು ಎರಡಾಗಿ ವಿಂಗಡಿಸಬಹುದು.

1. ಸೃಜನಾತ್ಮಕ ಸಾಹಿತ್ಯ ಅಥವಾ ಶುದ್ಧ ಸಾಹಿತ್ಯ.
2. ಜ್ಞಾನ ಸಾಹಿತ್ಯ ಅಥವಾ ವೈಜ್ಞಾನಿಕ ಸಾಹಿತ್ಯ.

ಒಂದು ಹೃದಯಕ್ಕೆ ಸಂಬಂಧಿಸಿದ್ದು, ಇನ್ನೊಂದು ಬುದ್ಧಿಗೆ ಸಂಬಂಧಿಸಿದ್ದು. ಇವೆರಡೂ ಸಮನಾಗಿ ಬೆಳೆದಾಗ ಯಾವ ಜನಾಂಗವನ್ನು ನಾವು ವಿಕಾಸದತ್ತ ಕೊಂಡೊಯ್ಯಲು ಹವಣಿಸುತ್ತಿದ್ದೇವೋ ಅದು ಸಾಧ್ಯವಾಗುತ್ತದೆ. ಭಾಷೆ ಮತ್ತು ಸಾಹಿತ್ಯ ಸಂಕೀರ್ಣವಾದ್ದುದು. ಯಾಕೆಂದರೆ ಅದು ಮನುಷ್ಯನಿಗೆ ಸಂಬಂಧಿಸಿದ್ದು. ಮನುಷ್ಯ ಸಂಕೀರ್ಣ ತಾನೇ. ಇವುಗಳ ಪರಸ್ಪರ ಸಂಬಂಧ ಎಷ್ಟು ಸಂಕೀರ್ಣವೆಂದರೆ ಓದು ಬರಹ ಬಾರದವನೂ ಭಾಷೆ ಮತ್ತು ಸಾಹಿತ್ಯದಲ್ಲಿ ಹಿಡಿತ ಸಾಧಿಸುತ್ತಾನೆ. ಅಂದರೆ ಒಂದರ್ಥದಲ್ಲಿ ಓದು ಬರಹ ಇಲ್ಲದೆಯೂ ಬದುಕಬಹುದು. ಮನುಷ್ಯನ ಬದುಕಿಗೆ ಓದು ಬರಹ ಅನಿವಾರ್ಯವಲ್ಲ; ಭಾಷೆ

ಮತ್ತು ಸಾಹಿತ್ಯ ಅನಿವಾರ್ಯ. ಈ ಅಭಿಪ್ರಾಯದ ಮೇಲೆ ಇಂದಿನ ಶ್ರವ್ಯ ಮತ್ತು ದೃಶ್ಯ ಸಾಹಿತ್ಯಗಳು ನಿಂತಿವೆ. (ಆಕಾಶವಾಣಿ, ದೂರದರ್ಶನ ಇತ್ಯಾದಿ).

ಮೇಲಿನ ಅಂಶಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದರೆ ಒಂದು ಬ್ಯಾರಿ ಮನೆಯಲ್ಲಿ ಓದು ಬರಹ ಬಲ್ಲವನೊಬ್ಬನಿಗೆ ಆ ಮನೆಯ ಇಡೀ ಕುಟುಂಬ ಮಾತನಾಡುವ ಭಾಷೆಯ ಮೂಲಕ ಸಾಹಿತ್ಯವನ್ನು ಒದಗಿಸಬಹುದು. ಆ ಸಾಹಿತ್ಯ ಸೃಜನಾತ್ಮಕವಾಗಿರಬಹುದು, ವೈಜ್ಞಾನಿಕವಾಗಿರಬಹುದು. ಅನುಭವದ ಆಳ, ಸಮುದಾಯದ ಹಿತದೃಷ್ಟಿ, ಹೇಳಬೇಕೆಂಬ ತವಕಗಳು ಒಂದುಗೂಡಿದಾಗ ಉಂಟಾಗುವ ಸಾಹಿತ್ಯದಿಂದ ಖಂಡಿತವಾಗಿ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಾಗಬಹುದು.

ಒಂದು ಸಾಹಿತ್ಯ ಮೂರು ಸಾರಿ ಹುಟ್ಟುತ್ತದೆ. ಒಂದು : ಸಾಹಿತಿಯಿಂದ ಸೃಷ್ಟಿಯಾಗುತ್ತದೆ. ಎರಡು : ಓದುಗನಲ್ಲಿ ಅದು ಮರು ಹುಟ್ಟು ಪಡೆಯುತ್ತದೆ. ಮೂರು: ಕೇಳುವವನಲ್ಲಿ ಮೂರನೇ ಹುಟ್ಟು ಪಡೆಯುತ್ತದೆ. ಒಟ್ಟಿನಲ್ಲಿ ಮನುಷ್ಯನ ಬದುಕನ್ನು ಹಲವಾರು ರೀತಿಗಳಲ್ಲಿ ಸಾಹಿತ್ಯ ಆವರಿಸಿಕೊಂಡಿರುವುದರಿಂದ ಬದುಕನ್ನು ಪರಿವರ್ತಿಸುವ ಗುಣವೂ ಸಾಹಿತ್ಯಕ್ಕಿದೆ.

ಆದರೆ ಈ ಸಾಹಿತಿಗಳು ನಿಜವಾಗಿ ಬ್ಯಾರಿ ಸಮುದಾಯದ ಪರಿವರ್ತನೆ ಬಯಸುವುದಾದರೆ ಶೀಲ, ನಡತೆ, ಚಾರಿತ್ರ್ಯ, ಮನೋವೃತ್ತಿಗಳ ದೃಷ್ಟಿಯಿಂದ ಪರಿಶುದ್ಧರಾಗಿರಬೇಕು.

ಮೌಲ್ಯ ಮತ್ತು ಗುರಿ : ಈ ಪ್ರಬಂಧದ ಮೌಲ್ಯ ಮತ್ತು ಗುರಿಯನ್ನು ಈ ರೀತಿ ಒಂದು ಕುರಾನಿನ ಎಚ್ಚರಿಕೆಯೊಂದಿಗೆ ಗುರುತಿಸಿಕೊಳ್ಳಬಹುದು.

''ಇನ್ನು ಕವಿಗಳು - ಅವರ ಹಿಂದೆ ದಾರಿಗೆಟ್ಟವರು ನಡೆಯುತ್ತಿರುತ್ತಾರೆ. ಅವರು ಪ್ರತಿಯೊಂದು ಕಣಿವೆಯಲ್ಲಿ ಅಲೆದಾಡುವುದನ್ನು ನೀವು ಕಾಣುತ್ತಿಲ್ಲವೇ? ಅವರು ತಾವು ಮಾಡದಿದ್ದುದನ್ನು ಆಡುತ್ತಾರೆ.'' (26:224-226)

ಇದರ ಒಟ್ಟು ತಾತ್ಪರ್ಯವೇನೆಂದರೆ ಯಾವ ಸಾಹಿತಿಗೆ, ಯಾವ ಕವಿಗೆ ತನ್ನ ವಿಚಾರವನ್ನು ಯೋಚಿಸುವ ಮತ್ತು ವಾಕ್ ಸಾಮರ್ಥ್ಯವನ್ನು ಉಪಯೋಗಿಸಲು ನಿಶ್ಚಿತ ಮಾರ್ಗ, ನಿರ್ದಿಷ್ಟ ಗುರಿ, ನಿಯೋಜಿತ ಜನಾಂಗವಿಲ್ಲವೋ ಆ ಸಾಹಿತಿ ಅಥವಾ ಕವಿ ಲಂಗುಲಗಾಮಿಲ್ಲದೆ ಅಲೆದಾಡಿಕೊಂಡಿರುತ್ತಾನೆ. ತನ್ನ ಅಪಕ್ವ ವಿಚಾರಗಳೊಂದಿಗೆ ಅವನು ತನ್ನ ಸಂಗಡಿಗರನ್ನೂ ಅಲೆಸುತ್ತಾನೆ. ತಾನು ಮಾಡದ್ದನ್ನು ಆಡಿ ತೋರಿಸುತ್ತಾನೆ. ಸ್ವತಃ ಮಾಡುವುದನ್ನು ಮತ್ತು ಇತರರು ಮಾಡಬಹುದಾದನ್ನು ಆಡಿ ತೋರಿಸುವ ಸಾಹಿತಿ ಮತ್ತು ಕವಿಗಳು ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿರುತ್ತಾರೆ. ಸಾಹಿತ್ಯದ ಮೌಲ್ಯ ಮತ್ತು ಸಾಹಿತ್ಯದ ಗುರಿ ಇದುವೇ ಆಗಿರುತ್ತದೆ.

ಇಂತಹ ಸಾಹಿತ್ಯ ನಮ್ಮ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸಬಹುದು.

ಅಲ್ಲಾಹನು ಕರುಣೆ ತೋರಲಿ, ಆಮೀನ್.